# ಶ್ರೀ ಶುಭದುರ್ಗಾ ವ್ರತ

**ಸಾಕ್ಷಾತ್ ಶ್ರೀ ಜಗನ್ಮಾತೆಯಿಂದ ಅನುಗ್ರಹಿಸಲ್ಪಟ್ಟ ಅದ್ಭುತ ವ್ರತ**



**ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ**



ಯಾ ದೇವಿ ಸರ್ವಭೂತೇಷು ಮಾತೃರೂಪೇಣಸಂಸ್ಥಿತಃ |

ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ||

**ಶ್ರೀರಸ್ತು ಶುಭಮಸ್ತು ಅವಿಘ್ನಮಸ್ತು**

# ಶ್ರೀ ಶುಭದುರ್ಗಾ ವ್ರತ

**(ಸಾಕ್ಷಾತ್ ಶ್ರೀ ಜಗನ್ಮಾತೆಯಿಂದ ಅನುಗ್ರಹಿಸಲ್ಪಟ್ಟ ಅದ್ಭುತ ವ್ರತ)**



**(ವಿಶ್ವಪತಿ)**

**ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ**

**SHRI DESIGNS**

**VEDIC LOGO DESIGNERS**

**www.lordofsevenhills.com**

**Cell : + 91 9849443752**

**Hyderabad**

**2021**

# ಶ್ರೀ ಶುಭದುರ್ಗಾ ವ್ರತ

**(ಸಾಕ್ಷಾತ್ ಶ್ರೀ ಜಗನ್ಮಾತೆಯಿಂದ ಅನುಗ್ರಹಿಸಲ್ಪಟ್ಟ ಅದ್ಭುತ ವ್ರತ)**

**ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ**

© **ಸರ್ವಹಕ್ಕುಗಳು ರಚಯಿತನದು**

**ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿಯವರು ರಚಿಸಿದ ಆಧ್ಯಾತ್ಮಿಕ ಪುಸ್ತಕಗಳನ್ನು ಈ ವೆಬ್ಸೈಟಿನಿಂದ ಉಚಿತವಾಗಿ ಪ್ರಿಂಟ್ ಮಾಡಿಕೊಳ್ಳಬಹುದು**

**www.lordofsevenhills.com**

**T.V.R.K. MURTHY, M.Tech**

**Flat No.903, F-Block, Vertex Sadguru Krupa Apartments**

**Beside Sanghamitra School, Nizampet Road**

**HYDERABAD – 500 085, India**

**Cell : + 91 9849443752**

**Email : viswapathi@yahoo.com, shridesigns@gmail.com**

# ಮುನ್ನುಡಿ

**ಯಾ ದೇವಿ ಸರ್ವಭೂತೇಷು ಮಾತೃರೂಪೇಣಸಂಸ್ಥಿತಃ |**
**ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ||**

ಜಗನ್ಮಾತೆ ದಯಾಹೃದಯದವಳು. ನಮ್ಮನ್ನೆಲ್ಲಾ ತುಂಬಾ ವಾತ್ಸಲ್ಯದಿಂದ ನೋಡುವ ತಾಯಿ. ಆ ತಾಯಿಯು ಅಭಯದ ನೋಟದಿಂದ ಲೋಕಕ್ಕೆಲ್ಲಾ ಯಾವುದೇ ಅಪಾಯ ಸಂಭವಿಸದ ಹಾಗೆ ಶುಭಪ್ರದವಾಗಿ ನಡೆಸುತ್ತಾಳೆ. ಜಗನ್ಮಾತೆಯು ತ್ರಿಮೂರ್ತಿಗಳಿಗೆ ಮೂಲ ಪರಬ್ರಹ್ಮಸ್ವರೂಪಿಣಿ. ಸೃಷ್ಟಿಯಲ್ಲಿರುವ ದೇವತೆಗಳೆಲ್ಲರ ಶಕ್ತಿಗಳು ಆ ತಾಯಿಯ ಅನುಗ್ರಹವೇ! ಯಾರು ಜಗನ್ಮಾತೆಯನ್ನು ನಿತ್ಯವೂ ಪೂಜಿಸುತ್ತಾರೋ ಅವರಿಗೆ ಯಾವುದಕ್ಕೂ ಕೊರತೆಯಿರದು. ಜೀವಿತವು ಶುಭಪ್ರದವಾಗಿ ನಡೆಯುತ್ತದೆ.

1983ರಲ್ಲಿ ರೀಜನಲ್ ಇಂಜಿನಿಯರಿಂಗ್ ಕಾಲೇಜು, ವಾರಂಗಲ್.ನಿಂದ ಎಂ.ಟೆಕ್. ಓದಿದ ನಾನು 1984ರವರೆಗೆ ಆಲ್ವಿನ್ ಕಂಪನಿಯಲ್ಲಿ, 1989ವರೆಗೆ ಎಂ.ವಿ.ಎಸ್.ಆರ್. ಇಂಜಿನಿಯರಿಂಗ್ ಕಾಲೇಜಿನಲ್ಲಿ ಉದ್ಯೋಗವನ್ನು ಮಾಡಿದೆನು. 1983ನಲ್ಲಿ ಚಿ|| ಸೌ|| ವೆಂಕಟ ರುಕ್ಮಿಣಿ ವೈದೇಹಿಯೊಂದಿಗೆ ವಿವಾಹ. ಮೂವರು ಮಕ್ಕಳು : ಆನಂದಿ, ಆಮುಕ್ತ ಮತ್ತು ಆದಿತ್ಯ.

1998ರಿಂದ ಬಿಸಿನೆಸ್ ಸಂಸ್ಥೆಗಳಿಗೆ ವೇದಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರದ ಆಧಾರದ ಮೇಲೆ ಹೆಸರನ್ನು ನಿರ್ಣಯಿಸುವುದು, ಲೋಗೋ ಡಿಸೈನ್.ಗಳನ್ನು ಮಾಡುವುದರಲ್ಲಿ ತೊಡಗಿಕೊಂಡಿದ್ದೇನೆ. ಇಲ್ಲಿಯವರೆಗೆ ನಾನು ಲೋಗೋ ಡಿಸೈನ್.ಗಳನ್ನು ಮಾಡಿಕೊಟ್ಟಂತಹ 5,000ಕ್ಕೂ ಹೆಚ್ಚಿನ ಸಂಸ್ಥೆಗಳು ದೇಶ, ವಿದೇಶಗಳಲ್ಲಿ ಪ್ರಮುಖ ಸ್ಥಾನದಲ್ಲಿದೆ ಎಂದರೆ ಅದೆಲ್ಲಾ ಆ ಶ್ರೀ ಶ್ರೀನಿವಾಸನ ಅನುಗ್ರಹವಲ್ಲದೇ ಬೇರೇನೂ ಅಲ್ಲ.

ಆ ಶ್ರೀ ಶ್ರೀನಿವಾಸನ ದಯದಿಂದ, ನಾನು ಇಲ್ಲಿಯವರೆಗೆ ಇಪ್ಪತ್ತನಾಲ್ಕು ಪುಸ್ತಕಗಳನ್ನು ರಚಿಸುವುದು ಸಾಧ್ಯವಾಯಿತು. ಇದರಲ್ಲಿ ಹದಿನಾಲ್ಕು ಪುಸ್ತಕಗಳು ಆ ಶ್ರೀ ಶ್ರೀನಿವಾಸನ ಲೀಲಾ ವಿಶೇಷಗಳ ಮೇಲೆಯೇ! ಈ ಪುಸ್ತಕವನ್ನು ದೇಶ ವಿದೇಶಗಳಲ್ಲಿ ಭಕ್ತರು ನಿತ್ಯವೂ ಪಠಿಸುತ್ತಿರುವುದು ಆ ಸ್ವಾಮಿಯ ಅನುಗ್ರಹವೇ ಆಗಿದೆ. ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರಿಗೂ ಅನೇಕ ಶುಭಗಳು ಜರುಗುತ್ತಿವೆ. ಆ ಶ್ರೀ ಶ್ರೀನಿವಾಸನ ಅನುಗ್ರಹದಿಂದ ಇವರೆಲ್ಲರೂ ಬಹಳ ಸುಖವಾಗಿ ಜೀವಿಸುತ್ತಿದ್ದಾರೆ. ಈ ರಚಿಸಿದ ಪುಸ್ತಕಗಳಲ್ಲಿ ಶ್ರೀ ವೆಂಕಟೇಶ್ವರ ವ್ರತಕಲ್ಪ, ಶ್ರೀ ಲಕ್ಷ್ಮೀನರಸಿಂಹ ವ್ರತಕಲ್ಪ, ಶ್ರೀ ಆನಂದ ಆಂಜನೇಯ, ಶ್ರೀ ಮಹೇಶ್ವರ ವ್ರತ, ಶ್ರೀ ಸುಬ್ರಮಣ್ಯ ವ್ರತ, ಶ್ರೀ ಸಾಯಿರಕ್ಷಾ ವ್ರತ, ಶ್ರೀ ರಾಮರಕ್ಷಾ ವ್ರತ, ಶ್ರೀ ಜ್ಞಾನ ಸರಸ್ವತಿ ವ್ರತ - ಇವುಗಳ ಆಚರಣೆಯಿಂದ ಭಕ್ತರು ತಮ್ಮ ಮನೋಕಾಮನೆ - ಅಭಿಲಾಷೆಗಳನ್ನು ಹೊಂದಿರುತ್ತಾರೆ. ಈ ಎಂಟು ವ್ರತವನ್ನು ನಿತ್ಯವೂ ಅನೇಕ ಭಕ್ತರ ಮನೆಗಳಲ್ಲಿ, ಅನೇಕ ದೇವಾಲಯಗಳಲ್ಲಿ ಆಚರಿಸಲ್ಪಡುತ್ತಿವೆ. ಇದಕ್ಕೆ ಮಿಗಿಲಾದ ಭಾಗ್ಯವೇನಿದೆ?

ತುಂಬಾ ಸಮಯದಿಂದ ಕೆಲವು ಭಕ್ತರು ನನ್ನನ್ನು ಜಗನ್ಮಾತೆಗೆ ಸಂಬಂಧಿಸಿದ ಯಾವುದಾದರೂ ಸುಲಭ ವ್ರತ ವಿಧಾನವನ್ನು ರಚಿಸಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಆದರೆ, ಭಗವಂತನಿಗೆ ಸಂಬಂಧಪಟ್ಟ ಯಾವ ಪುಸ್ತಕವಾದರೂ ಆ ದೇವರ ಕರುಣೆಯಿಲ್ಲದೇ ಸಿದ್ಧಿಸದು. ಎರಡು ವರ್ಷದ ಹಿಂದೆ ನಾನು ವಿಜಯವಾಡ ಶ್ರೀ ಕನಕದುರ್ಗಮ್ಮ ತಾಯಿಯನ್ನು

ದರ್ಶಿಸುತ್ತಿರುವಾಗ ನನಗೆ ಆ ಜಗನ್ಮಾತೆಯ ಅನುಗ್ರಹವೂ, ಆದೇಶವೂ ಸಿಕ್ಕಿತು. ಆ ತಾಯಿಯ ಕರುಣಾ ಕಾಟಾಕ್ಷದಿಂದ ಈ ಪುಸ್ತಕವನ್ನು ಈಗ ಬರೆಯಲಾಯಿತು. ಆಚರಿಸಿದ ಕೂಡಲೇ ಸಮಸ್ತ ಶುಭಗಳನ್ನು ಅನುಗ್ರಹಿಸುವ ಈ ಶ್ರೀ ಶುಭದುರ್ಗಾ ವ್ರತವು ಆ ಜಗನ್ಮಾಥೆಯ ಅನುಗ್ರಹವಲ್ಲದೇ ಇನ್ನೇನಲ್ಲ. ಕಲಿಯುಗದಲ್ಲಿರುವ ನಮ್ಮೆಲ್ಲರ ಶಕ್ತಿಹೀನತೆ ಆ ತಾಯಿಗೆ ತಿಳಿದಿದೆ. ಆದ್ದರಿಂದ ದಯಾಮಯಳಾದ ಆ ತಾಯಿಯು ನಮ್ಮೆಲ್ಲರಿಗೆ ತುಂಬಾ ಸುಲಭದ ಈ ವ್ರತವನ್ನು ಅನುಗ್ರಹಿಸಿದ್ದಾಳೆ. ಈ ವ್ರತವನ್ನು ಮಾಡುವುದು ತುಂಬಾ ಸುಲಭ. ಯಾರಾದರೂ, ಯಾವಾಗಲಾದರೂ, ಈ ವ್ರತವನ್ನು ಆಚರಿಸಿ, ಆ ತಾಯಿಯ ಅನುಗ್ರಹವನ್ನು ಪಡೆದುಕೊಳ್ಳಬಹುದು. ಶ್ರೀ ಶುಭದುರ್ಗಾ ದೇವಿಯನ್ನು ಆರಾಧಿಸುವುದರಿಂದ ತೇಜಸ್ಸು, ಯಶಸ್ಸು, ಬುದ್ಧಿ, ಜ್ಞಾನ, ವಿಕಾಸ, ಕಾರ್ಯಸಿದ್ಧಿ, ಶೀಘ್ರಕಲ್ಯಾಣ, ಸತ್ಸಂತಾನ ಪ್ರಾಪ್ತಿ, ಪದೋನ್ನತಿ, ಆರೋಗ್ಯ, ಅಷ್ಟೈಶ್ವರ್ಯಗಳು ಲಭಿಸುತ್ತವೆ.

ಈ ಪುಸ್ತಕದ ರಚನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿರುವ ಪ್ರತೀಯೊಬ್ಬರಿಗೂ, ಈ ವ್ರತವನ್ನು ಆಚರಿಸಿರುವ ತಮಗೂ, ವ್ರತಕಥೆಯನ್ನು ಹೇಳಿದ/ಕೇಳಿದವರಿಗೂ, ಪ್ರಸಾದವನ್ನು ಸ್ವೀಕರಿಸಿದವರಿಗೂ ಸಕಲ ಸೌಭಾಗ್ಯ, ಆಯುರಾರೋಗ್ಯಗಳನ್ನು ಅನುಗ್ರಹಿಸಬೇಕೆಂದು ಆ ಜಗನ್ಮಾತೆಯನ್ನು ಪ್ರಾರ್ಥಿಸುತ್ತಿದ್ದೇನೆ.

|| ಸರ್ವೇ ಜನಾಃ ಸುಖಿನೋ ಭವಂತು | ಸಮಸ್ತ ಸನ್ಮಂಗಳಾನಿ ಭವಂತು ||
|| ಶ್ರೀ ಶುಭದುರ್ಗಾ ಕಟಾಕ್ಷ ಸಿದ್ಧಿರಸ್ತು ||

ಹೈದರಾಬಾದ್ **ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ**
ದಿನಾಂಕ: 16-1-2021

************

# ಈ ವ್ರತವನ್ನು ಹೇಗೆ ಆಚರಿಸಬೇಕು?

- ವ್ರತವನ್ನು ಯಾರಾದರೂ, ಯಾವಾಗಲಾದರೂ, ವಯಸ್ಸಿನಿಂದಾಗಲೀ, ಕುಲದಿಂದಾಗಲೀ, ಭೇದಭಾವವಿಲ್ಲದೇ ಓದಬಹುದು. ಸ್ತ್ರೀ, ಪುರುಷ ಬೇಧವಿಲ್ಲ. ಯಾವ ಮಾಸದಲ್ಲಾಗಲೀ, ಯಾವ ದಿನಗಳಲ್ಲಾಗಲೀ ಓದಬಹುದು. ಈ ವ್ರತವನ್ನು ಆಚರಿಸುವ ದಿನ ಖಂಡಿತಾ ಉಪವಾಸ ಇರಬೇಕೆಂಬ ನಿಯಮ ಇರುವುದಿಲ್ಲ.

- ಯಾವ ಮಾಸದಲ್ಲಾಗಲೀ, ಯಾವುದೇ ಶುಕ್ರವಾರದ ದಿನ ಈ ವ್ರತವನ್ನು ಆಚರಿಸಬಹುದು. ಮುಖ್ಯವಾಗಿ ಚೈತ್ರ, ವೈಶಾಖ, ಶ್ರಾವಣ, ಅಶ್ವಯುಜ, ಕಾರ್ತಿಕ, ಮಾರ್ಘಶಿರ, ಮಾಘ ಮಾಸಗಳ ಯಾವುದೇ ಶುಕ್ರವಾರದ ದಿನ ಆಚರಿಸಿದರೆ ಅತ್ಯಂತ ಫಲದಾಯಕ. ದಶಮಿ, ಏಕಾದಶಿ, ಸಂಕ್ರಾಂತಿ ಅಥವಾ ಹುಣ್ಣಿಮೆಯಿಂದ ಕೂಡಿದ ಶುಕ್ರವಾರವಾದರೆ ಹೆಚ್ಚು ಶ್ರೇಷ್ಠ. ದಸರಾ, ನವರಾತ್ರಿಗಳಲ್ಲಿ ಯಾವ ದಿನವಾದರೂ ಆಚರಿಸಿದರೇ ಅನೇಕ ಶುಭಗಳು ಉಂಟಾಗುತ್ತವೆ. ನವರಾತ್ರಿಯ ಪ್ರತಿದಿನ ಆಚರಿಸಿದವರಿಗೆ ಸಾವಿರ ಅಶ್ವಮೇಧಯಾಗದ ಫಲ ಲಭಿಸುತ್ತದೆ. ಈ ವ್ರತವನ್ನು ಆಚರಿಸುವ ಮಹಿಳೆಯರು ಧೀರ್ಘಸುಮಂಗಳಿಯರಾಗಿ ಬಾಳುತ್ತಾರೆ. ಈ ವ್ರತವನ್ನು ಮಾಡುವ ಕನ್ಯೆಯರಿಗೆ ಉತ್ತಮ ವರನೊಂದಿಗೆ ಕೂಡಲೇ ವಿವಾಹ ನಿಶ್ಚಯವಾಗುತ್ತದೆ. ಸಂತಾನಭಾಗ್ಯವಿಲ್ಲದವರು ಈ ವರವನ್ನು ಮಾಡಿದ ಕೂಡಲೆ ಅವರಿಗೆ ಒಳ್ಳೆಯ ಸಂತಾನವಾಗುತ್ತದೆ. ಅನಾರೋಗ್ಯದಿಂದ ಇದ್ದವರಿಗೆ ಕೂಡಲೆ ಒಳ್ಳೆಯ ಆರೋಗ್ಯ ಉಂಟಾಗುತ್ತದೆ. ವ್ಯಾಪಾರದಲ್ಲಿ ಲಾಭ ಉಂಟಾಗುತ್ತದೆ. ಯಾವ ಮನೆಯಲ್ಲಿ ಪ್ರತಿ ಶುಕ್ರವಾರ ದಂಪತಿಗಳಲ್ಲಿ ಯಾರಾದರೂ ಒಬ್ಬರು ಈ ವ್ರತವನ್ನು ಮಾಡುತ್ತಿರುತ್ತಾರೋ ಅವರ ಮನೆಯಲ್ಲಿ ಸರ್ವ ಸೌಭಾಗ್ಯಗಳೂ ಉಂಟಾಗುತ್ತದೆ. ಅವರ ಮನೆ ಯಾವತ್ತೂ ಧನ ಧಾನ್ಯಗಳಿಂದ ತುಂಬಿ ತುಳುಕುತ್ತಿರುತ್ತದೆ. ಯಾವುದಕ್ಕೂ ಕೊರತೆಯಿರುವುದಿಲ್ಲ.

- ಈ ವ್ರತವನ್ನು ಆಚರಿಸುವ ಮೊದಲು, ಒಂದು ಸಾರಿ ಮನಸಲ್ಲೇ ಗಣಪತಿಗೆ, ನವಗ್ರಹದೇವತೆಗಳಿಗೆ, ಅಷ್ಟದಿಕ್ಪಾಲಕರಿಗೆ ನಮಸ್ಕರಿಸಬೇಕು. ಆನಂತರ, ನಿಮ್ಮ ಹೆಸರು, ನಿಮ್ಮ ಕುಟುಂಬದ ಸದಸ್ಯರ ಹೆಸರುಗಳು, ಅವರ ನಕ್ಷತ್ರಗಳು, ಗೋತ್ರವನ್ನು ಮನಸ್ಸಲ್ಲೇ ಸ್ಮರಿಸಿ, ವ್ರತವನ್ನು ಪ್ರಾರಂಭಿಸಬೇಕು. ಶ್ರೀ ದುರ್ಗಾ ಅಷ್ಟೋತ್ತರ ನಾಮಗಳನ್ನು ಪಠಿಸಬೇಕು. ನಂತರ ಈ ಪುಸ್ತಕದಲ್ಲಿರುವ ಐದು ಕಥೆಗಳನ್ನು ಓದಿ, ಶ್ರೀ ದುರ್ಗಾ ಅಮ್ಮನವರಿಗೆ ಯಾವುದಾದರೂ ಹಣ್ಣು ನಿವೇದಿಸಬೇಕು.

- ಈ ವ್ರತವನ್ನು ಆಚರಿಸುವ ದಿನ ಮುಂಜಾನೆ ಎದ್ದು ಸ್ನಾನವನ್ನು ಆಚರಿಸಿ, ತಮ್ಮ ಮನೆಯಲ್ಲಿರುವ ಪೂಜಾಮಂದಿರದಲ್ಲಿ ಕುಳಿತುಕೊಂಡು, ಮುಂದೆ ಶ್ರೀ ದುರ್ಗಾ ಮಾತೆಯ ಚಿತ್ರಪಟವನ್ನು ಇಟ್ಟುಕೊಂಡಿರಬೇಕು. ನಿಮ್ಮ ಪೂಜಾಮಂದಿರದಲ್ಲಿ ಅದಾಗಲೇ ಚಿತ್ರಪಟವಿದ್ದರೆ, ಬೇರೊಂದು ಅವಸರವಿಲ್ಲ. ಪೂಜಾಮಂದಿರದಲ್ಲಿ ಸ್ಥಳವೂ ಅನುಕೂಲವಿಲ್ಲದಿದ್ದರೆ, ಮನೆಯಲ್ಲಿ ಯಾವುದಾದರೂ ವಿಶಾಲ ಪ್ರದೇಶವನ್ನು ಮುಂದಾಗಿ ಸ್ವಚ್ಛಗೊಳಿಸಿ ಆಚರಿಸಬಹುದು. ಪೂರ್ವ, ಪಶ್ಚಿಮ ದಿಕ್ಕಿಗೆ ಅಭಿಮುಖವಾಗಿ ಕುಳಿತುಕೊಂಡು ಆಚರಿಸಬೇಕು.

- ಜಗನ್ಮಾತೆಯ ಆಲಯದಲ್ಲಿ ಈ ವ್ರತವನ್ನು ಆಚರಿಸಿದರೆ ಹೆಚ್ಚಿನ ಫಲ ಸಿಗುತ್ತದೆ. ಪುರುಷರಾದರೂ, ಸ್ತ್ರೀಯರಾದರೂ ಮನೆಯಲ್ಲಾಗಲೀ, ದೇವಾಲಯದಲ್ಲಾಗಲೀ

ಸಾಮೂಹಿಕವಾಗಿ ಕೂಡಾ ಆಚರಿಸಬಹುದು. ವ್ರತವನ್ನು ಪೂರ್ತಿ ಮಾಡಿದ ಮೇಲೆ ಜಗನ್ಮಾತೆ ಶ್ರೀ ಶುಭದುರ್ಗಾದೇವಿಯ ನೈವೇದ್ಯಕ್ಕೆ ಹಾಲು, ಸಕ್ಕರೆ, ಜೇನುತುಪ್ಪ, ಕ್ಷೀರಾನ್ನ, ಗೂಡಾನ್ನ, ತ್ರಿಮಧುರ, ಪುಳಿಹೊರ, ವಡೆಗಳು, ಹಣ್ಣುಗಳು ಇವುಗಳಲ್ಲಿ ಸಾಧ್ಯವಾದದ್ದು ಯಾವುದಾದರೂ ನಿವೇದಿಸಬಹುದು. ಶುಕ್ರವಾರದ ದಿನ ಆಚರಿಸುವಾಗ ಕ್ಷೀರಾನ್ನ, ಗೂಡಾನ್ನ, ತ್ರಿಮಧುರ, ಪುಳಿಹೊರವನ್ನು ನಿವೇದಿಸಿದರೆ ವಿಶೇಷ.

- ❖ ಪರೀಕ್ಷೆಗಳನ್ನು ಬರೆಯುವ ವಿದ್ಯಾರ್ಥಿಗಳು ಈ ವ್ರತದಲ್ಲಿಯ ಐದು ಕಥೆಗಳನ್ನು ಓದಿ, ಶ್ರೀ ದುರ್ಗಾದೇವಿಗೆ ಬಾಳೆಹಣ್ಣುಗಳನ್ನು ನಿವೇದಿಸಿ, ವ್ರತವನ್ನು ಸುಲಭವಾಗಿ ಆಚರಿಸಬಹುದು. ಅವರು ಬರೆಯುವ ಪರೀಕ್ಷೆಯಲ್ಲಿ ಅವರಿಗೆ ವಿಜಯವು ಕೈಗೂಡುತ್ತದೆ.

- ❖ ಯಾವ ಶಂಕರಮಠದಲ್ಲಾಗಲೀ ಕುಳಿತುಕೊಂಡು ಈ ಐದು ಕಥೆಗಳನ್ನು ಓದಿ, ಅಲ್ಲಿ ಪೂಜಿಸಲ್ಪಡುತ್ತಿರುವ ಶಾರದಾ ಮಾತೆಗೆ ಬಾಳೆಹಣ್ಣುಗಳನ್ನು ನೈವೇದ್ಯಕ್ಕೆ ಇಟ್ಟರೆ ವಿಶೇಷ ಫಲಿತವು ಸಿಗುತ್ತದೆ. ನೀವು ನೆನೆದ ಕೆಲಸಗಳೆಲ್ಲಾ ನಿರ್ವಿಘ್ನವಾಗಿ ಪೂರ್ತಿಯಾಗುತ್ತದೆ. ವಿವಾಹವಾಗದವರಿಗೆ ತಕ್ಷಣ ವಿವಾಹವು ಜರುಗುತ್ತದೆ. ಸಂತಾನವಿಲ್ಲದವರಿಗೆ ತ್ವರಿತದಲ್ಲೇ ಸತ್ಸಂತಾನವು ಉಂಟಾಗುತ್ತದೆ. ವಿದ್ಯಾರ್ಥಿಗಳಿಗೆ ಅವರ ತಂದೆತಾಯಿಯರು ಕೂಡಾ ಹೀಗೆ ಆಚರಿಸಿದರೆ ಅವರಿಗೆ ಪರೀಕ್ಷೆಗಳಲ್ಲಿ ವಿಜಯವು ಕೈಹಿಡಿಯುತ್ತದೆ. ಮುಂಜಾನೆಯಾಗಲೀ, ಸಾಯಂಕಾಲವಾಗಲೀ ಯಾವಾಗಲಾದರೂ ಆಚರಿಸಬಹುದು. ಉಪವಾಸವಿರಬೇಕಾದ ಅಗತ್ಯವಿಲ್ಲ.

- ❖ ಈ ವ್ರತವನ್ನು ಆಚರಿಸುವಾಗ ಪತಿ-ಪತ್ನಿ ಇಬ್ಬರು ಖಂಡಿತಾ ಒಟ್ಟಿಗೆ ಇದ್ದು ಆಚರಿಸಬೇಕೆಂಬ ನಿಯಮ ಇಲ್ಲ. ಪತಿಗೆ ಅನುಕೂಲವಾದಾಗ ಪತಿ, ಪತ್ನಿಗೆ ಅನುಕೂಲವಾದಾಗ ಪತ್ನಿ, ಹೀಗೆ ಅವರವರ ಅನುಕೂಲದಂತೆ ಅವರು ಆಚರಿಸಬಹುದು. ಸಾಧ್ಯವಾದಾಗ ಇಬ್ಬರೂ ಒಟ್ಟಿಗೆ ಆಚರಿಸಬಹುದು.

- ❖ ದುರದೃಷ್ಟದಿಂದ ಪತ್ನಿಯನ್ನು ಕಳೆದುಕೊಂಡ ಪುರುಷರು, ಪತಿಯನ್ನು ಕಳೆದುಕೊಂಡ ಸ್ತ್ರೀಯರು ಕೂಡ ನೀರಭ್ಯಂತರವಾಗಿ ಈ ವ್ರತವನ್ನು ಆಚರಿಸಬಹುದು. ಈ ವ್ರತವನ್ನು ಆಚರಿಸಿದವರಿಗೆ ಪೂರ್ತಿ ಮನಶ್ಶಾಂತಿ ಉಂಟಾಗುತ್ತದೆ.

- ❖ ಸಂತಾನವಿಲ್ಲದವರು ಯಾವ ದೇವಾಲಯದಲ್ಲಿ ಶುಕ್ರವಾರದ ದಿನ ಈ ಪುಸ್ತಕವನ್ನು ಓದಿದರೆ ಖಂಡಿತಾ ಒಳ್ಳೆಯ ಸಂತಾನಭಾಗ್ಯ ಉಂಟಾಗುತ್ತದೆ. ವಿವಾಹವಾಗದ ಕನ್ಯೆಯರಾಗಲೀ, ಯುವಕರಾಗಲೀ, ಈ ವಿಧವಾಗಿ ಓದಿದರೆ ಶೀಘ್ರದಲ್ಲೇ ವಿವಾಹವು ಜರುಗುತ್ತದೆ.

- ❖ ದೂರದೇಶದಲ್ಲಿರುವ ನಿಮ್ಮ ಮಕ್ಕಳ ನಿಮಿತ್ತ, ನೀವು ಕೂಡ ಓದಬಹುದು. ಅವರಿಗೆ ವಿದ್ಯೆ, ವಿವಾಹ, ಸಂತಾನ, ಉದ್ಯೋಗ, ಆರೋಗ್ಯಕ್ಕಾಗಿ ಈ ಪುಸ್ತಕವನ್ನು ಶುಕ್ರವಾರದ ದಿನ ಯಾವುದೇ ದೇವಾಲಯದಲ್ಲಾಗಲೀ ಓದಿದರೆ ತಕ್ಷಣ ಫಲಿತವು ಸಿಗುತ್ತದೆ.

ಈ ವಿಧವಾಗಿ, ಯಾವ ರೀತಿಯಲ್ಲಾಗಲಿ, ಯಾವ ದಿನದಲ್ಲಾಗಲಿ ಈ ಪುಸ್ತಕವನ್ನು ಓದಿ, ಶ್ರೀ ಶುಭದುರ್ಗಾಮಾತೆಯ ಅನುಗ್ರಹವನ್ನು ಪಡೆಯಬಹುದು.

********

# ಶ್ರೀ ದುರ್ಗಾ ಅಷ್ಟೋತ್ತರ ಶತನಾಮಾವಳಿ

ಓಂ ದುರ್ಗಾಯೈ ನಮಃ |
ಓಂ ಶಿವಾಯೈ ನಮಃ |
ಓಂ ಮಹಾಲಕ್ಷ್ಮ್ಯೈ ನಮಃ |
ಓಂ ಮಹಾಗೌರ್ಯೈ ನಮಃ |
ಓಂ ಚಂಡಿಕಾಯೈ ನಮಃ |
ಓಂ ಸರ್ವಜ್ಞಾಯೈ ನಮಃ |
ಓಂ ಸರ್ವಾಲೋಕೇಶ್ಯೈ ನಮಃ |
ಓಂ ಸರ್ವಕರ್ಮಫಲಪ್ರದಾಯೈ ನಮಃ |
ಓಂ ಸರ್ವತೀರ್ಥಮಯಾಯೈ ನಮಃ |
ಓಂ ಪುಣ್ಯಾಯೈ ನಮಃ | (10)
ಓಂ ದೇವಯೋನಯೇ ನಮಃ |
ಓಂ ಅಯೋನಿಜಾಯೈ ನಮಃ |
ಓಂ ಭೂಮಿಜಾಯೈ ನಮಃ |
ಓಂ ನಿರ್ಗುಣಾಯೈ ನಮಃ |
ಓಂ ಆಧಾರಶಕ್ತ್ಯೈ ನಮಃ |
ಓಂ ಅನೀಶ್ವರ್ಯೈ ನಮಃ |
ಓಂ ನಿರ್ಗುಣಾಯೈ ನಮಃ |
ಓಂ ನಿರಕಾರಾಯೈ ನಮಃ |
ಓಂ ಸರ್ವಗರ್ವವಿಮರ್ಧಿನ್ಯೈ ನಮಃ |
ಓಂ ಸರ್ವಲೋಕಪ್ರಿಯಾಯೈ ನಮಃ | (20)
ಓಂ ವಾಣ್ಯೈ ನಮಃ |
ಓಂ ಸರ್ವವಿದ್ಯಾಧಿದೇವತಾಯೈ ನಮಃ |
ಓಂ ಪಾರ್ವತ್ಯೈ ನಮಃ |
ಓಂ ದೇವಮಾತ್ರೇ ನಮಃ |
ಓಂ ಅನೀಶಾಯೈ ನಮಃ |
ಓಂ ವಿಂಧ್ಯವಾಸಿನ್ಯೈ ನಮಃ |
ಓಂ ತೇಜೋವತ್ಯೈ ನಮಃ |
ಓಂ ಮಹಾಮಾತ್ರೇ ನಮಃ |
ಓಂ ಕೋಟಿಸೂರ್ಯಸಮಪ್ರಭಾಯೈ ನಮಃ |
ಓಂ ದೇವತಾಯೈ ನಮಃ | (30)
ಓಂ ವಹ್ನಿರೂಪಾಯೈ ನಮಃ |
ಓಂ ತೇಜಸೇ ನಮಃ |
ಓಂ ವರ್ಣರೂಪಿಣ್ಯೈ ನಮಃ |
ಓಂ ಗುಣಾಶ್ರಯಾಯೈ ನಮಃ |
ಓಂ ಗುಣಮಧ್ಯಾಯೈ ನಮಃ |
ಓಂ ಗುಣತ್ರಯವಿವರ್ಜಿತಾಯೈ ನಮಃ |

ಓಂ ಕರ್ಮಜ್ಞಾನಪ್ರದಾಯೈ ನಮಃ |
ಓಂ ಕಾಂತಾಯೈ ನಮಃ |
ಓಂ ಸರ್ವಸಂಹಾರಕಾರಿಣ್ಯೈ ನಮಃ |
ಓಂ ಧರ್ಮಜ್ಞಾನಾಯೈ ನಮಃ | (40)
ಓಂ ಧರ್ಮನಿಷ್ಠಾಯೈ ನಮಃ |
ಓಂ ಸರ್ವಕರ್ಮವಿವರ್ಜಿತಾಯೈ ನಮಃ |
ಓಂ ಕಾಮಾಕ್ಷ್ಯೈ ನಮಃ |
ಓಂ ಕಾಮಾಸಂಹತ್ರ್ಯೈ ನಮಃ |
ಓಂ ಕಾಮಕ್ರೋಧವಿವರ್ಜಿತಾಯೈ ನಮಃ |
ಓಂ ಶಾಂಕರ್ಯೈ ನಮಃ |
ಓಂ ಶಾಂಭವ್ಯೈ ನಮಃ |
ಓಂ ಶಾಂತಾಯೈ ನಮಃ |
ಓಂ ಚಂದ್ರಸುರ್ಯಾಗ್ನಿಲೋಚನಾಯೈ ನಮಃ |
ಓಂ ಸುಜಯಾಯೈ ನಮಃ | (50)
ಓಂ ಜಯಾಭೂಮಿಷ್ಠಾಯೈ ನಮಃ |
ಓಂ ಜಾಹ್ನವ್ಯೈ ನಮಃ |
ಓಂ ಜನಪೂಜಿತಾಯೈ ನಮಃ |
ಓಂ ಶಾಸ್ತ್ರಾಯೈ ನಮಃ |
ಓಂ ಶಾಸ್ತ್ರಮಯ್ಯೈ ನಮಃ |
ಓಂ ನಿತ್ಯಾಯೈ ನಮಃ |
ಓಂ ಶುಭಾಯೈ ನಮಃ |
ಓಂ ಚಂದ್ರಾರ್ಧಮಸ್ತಕಾಯೈ ನಮಃ |
ಓಂ ಭಾರತ್ಯೈ ನಮಃ |
ಓಂ ಭ್ರಾಮರ್ಯೈ ನಮಃ | (60)
ಓಂ ಕಲ್ಪಾಯೈ ನಮಃ |
ಓಂ ಕರಾಳ್ಯೈ ನಮಃ |
ಓಂ ಕೃಷ್ಣಪಿಂಗಳಾಯೈ ನಮಃ |
ಓಂ ಬ್ರಾಹ್ಮ್ಯೈ ನಮಃ |
ಓಂ ನಾರಾಯಣ್ಯೈ ನಮಃ |
ಓಂ ರೌದ್ರ್ಯೈ ನಮಃ |
ಓಂ ಚಂದ್ರಾಮೃತಪರಿವೃತಾಯೈ ನಮಃ |
ಓಂ ಜ್ಯೇಷ್ಠಾಯೈ ನಮಃ |
ಓಂ ಇಂದಿರಾಯೈ ನಮಃ |
ಓಂ ಮಹಾಮಾಯಾಯೈ ನಮಃ | (70)
ಓಂ ಜಗತ್ಸೃಷ್ಟ್ಯಾಧಿಕಾರಿಣ್ಯೈ ನಮಃ |
ಓಂ ಬ್ರಹ್ಮಾಂಡ ಕೋಟಿಸಂಸ್ಥಾನಾಯೈ ನಮಃ |
ಓಂ ಕಾಮಿನ್ಯೈ ನಮಃ |
ಓಂ ಕಮಲಾಲಯಾಯೈ ನಮಃ |

ಓಂ ಕಾತ್ಯಾಯನ್ಯೈ ನಮಃ |
ಓಂ ಕಲಾತೀತಾಯೈ ನಮಃ |
ಓಂ ಕಾಲಸಂಹಾರಕಾರಿಣ್ಯೈ ನಮಃ |
ಓಂ ಯೋಗಾನಿಷ್ಠಾಯೈ ನಮಃ |
ಓಂ ಯೋಗಿಗಮ್ಯಾಯೈ ನಮಃ |
ಓಂ ಯೋಗಧ್ಯೇಯಾಯೈ ನಮಃ | (80)
ಓಂ ತಪಸ್ವಿನ್ಯೈ ನಮಃ |
ಓಂ ಜ್ಞಾನರೂಪಾಯೈ ನಮಃ |
ಓಂ ನಿರಾಕಾರಾಯೈ ನಮಃ |
ಓಂ ಭಕ್ತಾಭೀಷ್ಟಫಲಪ್ರದಾಯೈ ನಮಃ |
ಓಂ ಭೂತಾತ್ಮಿಕಾಯೈ ನಮಃ |
ಓಂ ಭೂತಮಾತ್ರೇ ನಮಃ |
ಓಂ ಭೂತೇಶ್ಯೈ ನಮಃ |
ಓಂ ಭೂತಧಾರಿಣ್ಯೈ ನಮಃ |
ಓಂ ಸ್ವಧಾನಾರೀಮಧ್ಯಗತಾಯೈ ನಮಃ |
ಓಂ ಷಡಾಧಾರಾಧಿವರ್ಧಿನ್ಯೈ ನಮಃ | (90)
ಓಂ ಮೋಹಿತಾಯೈ ನಮಃ |
ಓಂ ಅಂಶುಭವಾಯೈ ನಮಃ |
ಓಂ ಶುಭ್ರಾಯೈ ನಮಃ |
ಓಂ ಸೂಕ್ಷ್ಮಾಯೈ ನಮಃ |
ಓಂ ಮಾತ್ರಾಯೈ ನಮಃ |
ಓಂ ನಿರಾಲಸಾಯೈ ನಮಃ |
ಓಂ ನಿಮಗ್ನಾಯೈ ನಮಃ |
ಓಂ ನೀಲಸಂಕಾಶಾಯೈ ನಮಃ |
ಓಂ ನಿತ್ಯಾಯೈ ನಮಃ |
ಓಂ ನಂದಿನ್ಯೈ ನಮಃ | (100)
ಓಂ ಹರಾಯೈ ನಮಃ |
ಓಂ ಪರಾಯೈ ನಮಃ |
ಓಂ ಸರ್ವಜ್ಞಾನಪ್ರದಾಯೈ ನಮಃ |
ಓಂ ಅನಂತಾಯೈ ನಮಃ |
ಓಂ ಸತ್ಯಾಯೈ ನಮಃ |
ಓಂ ದುರ್ಲಭರೂಪಿಣ್ಯೈ ನಮಃ |
ಓಂ ಸರಸ್ವತ್ಯೈ ನಮಃ |
ಓಂ ಸರ್ವಗತಾಯೈ ನಮಃ |
ಓಂ ಸರ್ವಾಭೀಷ್ಟಪ್ರದಾಯಿನ್ಯೈ ನಮಃ |
ಓಂ ಶ್ರೀದುರ್ಗಾಂಬಿಕಾಯೈ ನಮಃ | (108)

********

# ಷೋಡೋಶೋಪಚಾರಂ ಸಮರ್ಪಯಾಮಿ

ಅಂಬಾ ಶಾಂಭವಿ ಮಾತಾ ಶ್ರೀ ದುರ್ಗಾದೇವಿಕಿ
ಷೋಡೋಶೋಪಚಾರಂ ಸಮರ್ಪಯಾಮಿ ||
ಕದಂಬ ವನವಾಸಿನಿ ಕಾತ್ಯಾಯಿನಿ ದೇವತಕು
ಆವಾಹನ ಪ್ರಾರ್ಥನಿದೆ ಆಸನಂಬಿದೆ
ಅದ್ವಿತೀಯ ತೇಜಸ್ವಿಕಿ ಆನಂದ ಸ್ವರೂಪಿಣಿಕಿ
ಅರ್ಘ್ಯಪಾದ್ಯ ಆಚಮನಂ ಸಮರ್ಪಯಾಮಿ || 1 ||

ಸರ್ವಲೋಕ ಮಹೇಶ್ವರಿ ಸಾಂಬಶಿವುನಿ ರಾಣಿಕಿ
ಪಂಚಾಮೃತ ಶುದ್ಧೋದಕ ಸ್ನಾನಂಬಿದಿಗೋ
ಪರಮ ಪಾವನಂಬೈನ ಪರಂಜ್ಯೋತಿ ಪಾರ್ವತಿಕಿ
ಮಸ್ತ್ರಾಲಂಕಾರಮಿದೆ ಸಮರ್ಪಯಾಮಿ || 2 ||

ಗಂಧರ್ವಾದುಲ ನೇಲೇ ಗಣನಾಧುನಿ ಮಾತಾಕು
ಗಂಧಂ ಆಭರಣಾಲೆ ಸಮರ್ಪಯಾಮಿ
ಪೂರ್ಣದಯಾ ಜಲನಿಧಿ ಪೂಜನೀಯ ಭವಾನಿಕಿ
ಪುಷ್ಪಲಂಕರಣಮಿದೆ ಸಮರ್ಪಯಾಮಿ || 3 ||

ಸರ್ವಲೋಕ ಪ್ರಿಯವಾಣೀ ಸರ್ವೇಶ್ವರ ಜನನಿಕಿ
ಧೂಪಾಲು ದೀಪಾಲು ಸಮರ್ಪಯಾಮಿ
ಪರಬ್ರುಹ್ಮ ಸ್ವರೂಪಿಣಿ ಪರಮೇಶ್ವರಿ ದೇವಿಕಿ
ಪಾಲು ಪಾಂಡಿಲು ನೈವೇದ್ಯಂ ಸಮರ್ಪಯಾಮಿ || 4 ||

ಕರುಣಾಮೃತ ವರ್ಷಿಣಿ ಕಾಳಿಕಾಂಬ ದೇವತಕು
ತಾಂಬೂಲಂ ಆಚಮನಂ ಸಮರ್ಪಯಾಮಿ
ಒತ್ಯಸತ್ಯ ತೇಜೋಮಯ ನಿಖಿಲೇಶ್ವರಿಮಾತಕು
ನೀರಾಜನಮಿದೆ ನೀಕು ಸಮರ್ಪಯಾಮಿ || 5 ||

ಮಹಿಷಾಸುರ ಮರ್ಧಿನಿ ಮಹಾತ್ರಿಪುರ ಸುಂದರಿಕಿ
ಮಂತ್ರಪುಷ್ಪಮಿದೆ ನೀಕು ಸಮರ್ಪಯಾಮಿ
ಅಖಿಲ ಜಗತಿಪ್ಪೈ ನೀ ಕೃಪಾ ಅಂದಜೆಯುಮು ಜನನೀ
ಅಂಜಲಿದೆ ಸದಾ ನೀಕು ಸಮರ್ಪಯಾಮಿ || 6 || || ಅಂಜಲಿದೆ ||

********

# ಶ್ರೀ ಲಲಿತಾದೇವಿ ನೀರಾಜನಂ

1. ಶ್ರೀ ಚಕ್ರಪುರಮಂದು ಸ್ಥಿರಮ್ಮೈನ ಶ್ರೀ ಲಲಿತ ಪಸಿಮಿ ಪಾದಾಲಕು ನೀರಾಜನಂ
   ಪರಮೇಶ್ವರುಣಿ ಪುಣ್ಯಭಾಗ್ಯಲ ರಾಶಿ ಆ ಸಿಂಹ ಮಧ್ಯಕು ನೀರಾಜನಂ || ಶ್ರೀ ||

2. ಬಂಗಾರು ಹಾರಾಲು ಸಿಂಗಾರ ಮೊಳಕಿಂಚು ಅಂಬಿಕಾ ಹೃದಯಾಲು ನೀರಾಜನಂ
   ಶ್ರೀ ಗೌರಿ ಶ್ರೀ ಮಾತಾ ಶ್ರೀ ಮಹಾರಾಜಶ್ರೀ ಸಿಂಹಾಸನೇಶ್ವರಿಕಿ ನೀರಾಜನಂ || ಶ್ರೀ ||

3. ಕಲ್ಪತರುವುಗ ನನ್ನು ಕಾಪಾಡು ಕರಮುಲಕು ಕನಕಾಂಬರಾಲತೋ ನೀರಾಜನಂ
   ಪಾಶಾಂಕುಶಾ ಪುಷ್ಪಬಾಣ ಚಾಪದರಿಕಿ ಪರಮ ಪಾವನಮ್ಮೈನಾ ನೀರಾಜನಂ || ಶ್ರೀ ||

4. ಕಾಂತಿ ಕಿರಣಾಲತೋ ಕಲಿಕಿ ಮೆಡಲ ಮೆರಿಸೆಟಿ ಕಲ್ಯಾಣಸೂತ್ರಮುಲಕು ನೀರಾಜನಂ
   ಕಾಂತಾಲಂದರಿಕಿ ಪಸುಪು ಕುಂಕುಮಲಿಚ್ಚೇಟಿ ಕಾತ್ಯಯಿನಿಕಿ ನಿತ್ಯನೀರಾಜನಂ || ಶ್ರೀ ||

5. ಕಲುವರೇಕುಲ ವಂಟಿ ಕನ್ನುಲಾ ತಲ್ಲಿ ಶ್ರೀ ರಾಜರಾಜೇಶ್ವರಿಕಿ ನೀರಾಜನಂ
   ಮುದಮಾರ ಮೊಮುನ ಮುಚ್ಚಾಟಗ ಧರಿಯಿಂಚು ಕಸ್ತೂರಿ ಕುಂಕುಮಕು ನೀರಾಜನಂ
   || ಶ್ರೀ ||

6. ಚಂದ್ರುವಂಕನು ಶಿರ ಮುಕುಟಂಬುಲೋ ದಾಲ್ಚು ಸೌಂಧರ್ಯ ಲಹರಿಕಿ ನೀರಾಜನಂ
   ಶುಕ್ರವಾರಂನಾಡು ಶುಭಮು ಲೊಸಗೆ ತಲ್ಲಿ ಶ್ರೀ ಮಹಾಲಕ್ಷ್ಮೀಕಿ ನೀರಾಜನಂ || ಶ್ರೀ ||

7. ಶೃಂಗೇರಿ ಪೀಠಮುನ ಸುಂದರಾಕಾರಿಣೀ ಶಾರದಾ ಮಾತಾಕು ನೀರಾಜನಂ
   ಎಲ್ಲಲೋಕಾಲನು ಚಲ್ಲಗಾ ಪಾಲಿಂಚು ಬ್ರಹ್ಮಾಂಡರೂಪಿಣಿಕಿ ನೀರಾಜನಂ || ಶ್ರೀ ||

8. ಮುಗ್ಗುರಮ್ಮಲಕು, ಮೂಲಮ್ಮೈನಾ ಪೆದ್ದಮ್ಮಕು ಮುತ್ಯಾಲತೋ ನಿತ್ಯ ನೀರಾಜನಂ
   ರಾಗಜೀವನರಾಗ ನಾಮ ಸಂಕೀರ್ತನಗ ರಂಜಿಲ್ಲು ಕರ್ಪುರ ನೀರಾಜನಂ || ಶ್ರೀ ||

9. ಜನ್ಮಜನ್ಮಲ ತಲ್ಲಿಕಿ ಜಗದೀಶ್ವರೀ, ನೀಕು ಭಕ್ತಜನುಲಿಚ್ಚೇಟಿ ನೀರಾಜನಂ
   ನೀರಾಜನಂ ನಿತ್ಯ ನೀರಾಜನಂ, ನೀರಾಜನಂ ನಿತ್ಯ ನೀರಾಜನಂ || ಶ್ರೀ ||

********

# ಶ್ರೀ ಶುಭದುರ್ಗಾ ವ್ರತ

## ಪ್ರಥಮ ಅಧ್ಯಾಯ

## **ಕೋಮಲಾಂಬ ಕಥೆ**

ಪೂರ್ವಕಾಲದಲ್ಲಿ ಕೃಷ್ಣಾನದಿ ತೀರದಲ್ಲಿ ಶ್ರೀಕಾಕುಳಂ ಎಂಬ ಗ್ರಾಮವಿತ್ತು. ಆ ಊರಲ್ಲಿ ರಾಮಾಚಾರಿ ಎಂಬ ಬಡಬ್ರಾಹ್ಮಣನು ವಾಸಿಸುತ್ತಿದ್ದನು. ಅವನು ವಂಶಪಾರಂಪರ್ಯವಾಗಿ ಬಂದ ಪೌರೋಹಿತ್ಯ ವೃತ್ತಿಯನ್ನು ಮಾಡಿಕೊಂಡು ಸಂಸಾರವನ್ನು ಪೋಷಿಸುತ್ತಿದ್ದನು. ಅವನ ಹೆಂಡತಿ ಕೋಮಲಾಂಬೆಯು ಕೂಡಾ ಬಹಳ ಸೌಮ್ಯ ಸ್ವಭಾವದಿಂದ ಗಂಡನಿಗೆ ಹೆಚ್ಚಾಗಿ ಸಹಕರಿಸುತ್ತಾ ಸಂಸಾರವನ್ನು ಸುಲಲಿತವಾಗಿ ನಡೆಸುತ್ತಿದ್ದಳು. ಆ ದಂಪತಿಗಳಿಗೆ ಅಪರೂಪವಾಗಿ ಇಬ್ಬರು ಅವಳಿಮಕ್ಕಳು ಜನಿಸಿದರು. ಇಬ್ಬರೂ ಹೆಣ್ಣುಮಕ್ಕಳೇ. ಆ ಮಕ್ಕಳಿಗೆ ಲಲಿತ, ಪ್ರಣತಿಯೆಂದು ಹೆಸರಿಟ್ಟರು. ಇಬ್ಬರನ್ನೂ ಮುದ್ದಾಗಿ ಬೆಳೆಸಿದರು.

ಹೀಗಿರುವಾಗ ಕ್ರಮವಾಗಿ ಎರಡು ವರುಷ ಮಳೆಬಾರದೆ ವಿಪರೀತವಾದ ಬರಗಾಲದ ಪರಿಸ್ಥಿತಿ ಏರ್ಪಾಡಾಯಿತು. ಪ್ರಜೆಗಳಿಗೆ ತಿನ್ನಲು ಆಹಾರವಿಲ್ಲದೆ  ಹೆಚ್ಚಿನ ನೋವುಂಟಾಯಿತು. ಆರ್ಥಿಕಪರಿಸ್ಥಿತಿಗಳು ಸರಿಯಾಗಿರದೆ  ಪ್ರಜೆಗಳು ಪೂಜೆ, ವ್ರತಗಳನ್ನು ಕೂಡಾ ಮಾಡುವುದನ್ನು ಕಡಿಮೆಮಾಡಿದರು. ಇದರಿಂದಾಗಿ ರಾಮಾಚಾರಿಗೆ ಕೂಡಾ ಆದಾಯವು ತಗ್ಗಿತ್ತು. ಮನೆ ನಡೆಸುವುದು ಬಹಳ ಕಷ್ಟವಾಯಿತು. ಹೆಣ್ಣುಮಕ್ಕಳಿಬ್ಬರಿಗೂ 18 ವರ್ಷ ವಯಸ್ಸಾಯಿತು. ಇನ್ನು ಮದುವೆ ಸಂಬಂಧಗಳನ್ನು ನೋಡಬೇಕೆಂದು ಆಲೋಚನೆ ಮಾಡುತ್ತಿರುವಾಗ, ಈ ಎರಡು ಸಂವತ್ಸರಗಳು ಯಾವುದೇ ಸಂಪಾದನೆ ಇಲ್ಲದೇ ಮನೆ ನಡೆಸುವುದೇ ಬಹಳ ಕಷ್ಟವಾಗಿರುವಾಗ, ಇನ್ನು ವಿವಾಹದ ಬಗ್ಗೆ ಆಲೋಚಿಸುವುದೇನು ಎಂದು ತನ್ನೊಳಗೆ ಪ್ರಶ್ನಿಸಿದನು.

ದಿನ ದಿನಕ್ಕೆ ಮನೆಯಲ್ಲಿರುವ ಸರಕುಗಳೆಲ್ಲ ಖಾಲಿಯಾಗುತ್ತಾ, ಇನ್ನು ಎರಡು ದಿನಗಳು ಕಳೆದರೆ, ಪೂರ್ತಿ ಉಪವಾಸವಿರಬೇಕಾದ ಪರಿಸ್ಥಿತಿ, ಇದರಿಂದ ಕೋಮಲಾಂಬೆ ತುಂಬಾ ಚಿಂತಿತಳಾಗಿದ್ದಳು. ಅವಳು ಪ್ರತಿದಿನ ಶ್ರೀ ದುರ್ಗಾಮಾತೆಯನ್ನು ಪೂಜಿಸುತ್ತಿದ್ದಳು. ಪ್ರತಿನಿತ್ಯ ಆ ತಾಯಿಯನ್ನು, ತಮ್ಮನ್ನು ಈ ಕಷ್ಟಗಳಿಂದ ಕಾಪಾಡೆಂದು ಮೊರೆಯಿಡುತ್ತಿದ್ದಳು. ಆದರೂ ಆ ಕುಟುಂಬದ ಪರಿಸ್ಥಿತಿಯಲ್ಲಿ ಯಾವುದೇ ಬದಲಾವಣೆಯನ್ನು ಕಾಣದೇ ಬಹಳ ನೋಯುತ್ತಿದ್ದಳು. ಒಂದುದಿನ ರಾತ್ರಿ ಇದೇ ಆಲೋಚನೆಗಳಿಂದ ಬಾಧೆಪಡುತ್ತಾ ಮಲಗಿದಳು. ಆ ತಾಯಿಯನ್ನು ಅನೇಕ ವಿಧಗಳಿಂದ ಬೇಡುತ್ತಾ ಹೇಗಾದರೂ ತಮ್ಮ ಕುಟುಂಬವನ್ನು ಕಾಪಾಡೆಂದು ಪ್ರಾರ್ಥಿಸುತ್ತಾ ಮಲಗಿದಳು. ಏಕಾಂಗಿಯಾಗಿ ಮನಸ್ಸಲ್ಲಿ ನೋವು ಉಕ್ಕುತ್ತಿರುವುದರಿಂದ, ಎಷ್ಟು ಪ್ರಯತ್ನಿಸಿದರೂ ಕಣ್ಣುಗಳಿಗೆ ನಿದ್ರೆ ಹತ್ತಲಿಲ್ಲ.  ಹಾಗೇ ಆ ತಾಯಿಯನ್ನು ಪ್ರಾರ್ಥಿಸುತ್ತಿದ್ದಳು. ಸ್ವಲ್ಪ ಹೊತ್ತಿನಲ್ಲಿ ಅವಳಿಗೆ ನಿದ್ರೆ ಬಂದು, ಆ ನಿದ್ರೆಯಲ್ಲಿ ಅವಳಿಗೆ ಒಂದು ಕನಸ್ಸು ಬಂತು. ಆ ಕನಸ್ಸಿನಲ್ಲಿ ಕೋಮಲಾಂಬೆಯು ತುಂಬಾ ನೋವಿನಿಂದ ಬೇಗ ಬೇಗ ಹೆಜ್ಜೆ ಇಡುತ್ತಾ ಊರ ಕೊನೆಯಲ್ಲಿರುವ ಕೊಳದ ಕಡೆ ನಡೆಯುತ್ತಿದ್ದಾಳೆ. ಇನ್ನು ತನಗೆ ಆತ್ಮಹತ್ಯೆ ಬಿಟ್ಟು ಬೇರೆ ಆಶ್ರಯವಿಲ್ಲವೆಂದು ಆಲೋಚಿಸುತ್ತಾ ತುಂಬಾ ವೇದನೆಯಿಂದ ನಡೆಯತೊಡಗಿದಳು.

ಹೀಗೆ ಸ್ವಲ್ಪದೂರ ಹೋದಾಗ, ಒಮ್ಮೆಲೇ ಅವಳ ಕಣ್ಣು ಮುಂದೆ ಒಂದು ದೊಡ್ಡ ಬೆಳಕು ಹೊರಹೊಮ್ಮಿತು. ಆ ಬೆಳಕಲ್ಲಿ ಒಂದು ಸ್ತ್ರೀಮೂರ್ತಿಯೂ ಅದ್ಭುತ ಸೌಂದರ್ಯದಿಂದ ಪ್ರಜ್ವಲಿಸುವುದು ಕಾಣಿಸಿತು. ಎಷ್ಟೋ ದಿವ್ಯ ಆಭರಣಗಳನ್ನು ಧರಿಸಿ ಅದ್ಭುತವಾದ ತೇಜಸ್ಸಿನಿಂದ ಪ್ರಕಾಶಿಸುತ್ತಿರುವ ಅವಳಿಗೆ ಕೋಮಲಾಂಬೆಯು ಪ್ರಯತ್ನವಿಲ್ಲದೇ ಕೈಗಳನ್ನು ಜೋಡಿಸಿ ನಮಸ್ಕರಿಸಿದಳು. ಆಗ ಆ ಸ್ತ್ರೀಮೂರ್ತಿಯು ಕೋಮಲಾಂಬಳಿಗೆ ಹೀಗೆ ಹೇಳಿದಳು. 'ಮಗಳೇ ಕೋಮಲಾಂಬ! ಈ ದಿನದಿಂದ ನಿನ್ನ ಕಷ್ಟಗಳೆಲ್ಲಾ ನಿವಾರಣೆಯಾಯಿತು. ನಿನಗೆ 'ಶ್ರೀ ಶುಭದುರ್ಗಾ ವ್ರತ'ವೆಂಬ ವಿಶಿಷ್ಟವಾದ ಒಂದು ವ್ರತವನ್ನು ವಿವರಿಸುತ್ತೇನೆ. ನಾನು ಶುಭದುರ್ಗಳು. ಸರ್ವಶುಭಗಳನ್ನು ಅನುಗ್ರಹಿಸುತ್ತೇನೆ. ನೀನು ಮನೆಗೆ ಹೋಗಿ ನಾಳೆಯದಿನವೇ ಈ ವ್ರತವನ್ನು ಆಚರಿಸು. ನಿನಗೂ, ನಿನ್ನ ಕುಟುಂಬಕ್ಕೂ ಹೆಚ್ಚಿನ ಶುಭಗಳು ಜರುಗುತ್ತದೆ' ಎಂದಳು. ಆಗ ಕೋಮಲಾಂಬೆಯು ಆ ತಾಯಿಗೆ ನಮಸ್ಕರಿಸಿ, ತಾಯಿ ಜಗನ್ಮಾತಾ! ನನ್ನನ್ನು ಅನುಗ್ರಹಿಸಿದ್ದಕ್ಕೆ ತುಂಬಾ ಸಂತೋಷ. ನಿನ್ನನ್ನು ಯಾವರೀತಿಯಿಂದ ಸ್ತುತಿಸಿದರೂ ಕಡಿಮೆಯೇ. ನನ್ನ ಮೇಲೆ ದಯೆಯಿಟ್ಟುಕೊಂಡು ಆ ವ್ರತ ವಿಧಾನವನ್ನು ವಿವರವಾಗಿ ತಿಳಿಸಬೇಕೆಂದು ಬೇಡಿಕೊಂಡಳು.

ಆಗ ಶ್ರೀ ಶುಭದುರ್ಗಾ ಮಾತೆಯು ಕೋಮಲಾಂಬಳೊಡನೆ ಈ ವಿಧವಾಗಿ ಹೇಳಿದಳು. 'ನಾನು ಈಗ ಹೇಳುತ್ತಿರುವ ಈ ಶುಭದುರ್ಗಾ ವ್ರತವು ಬಹಳ ಸುಲಭವಾದದ್ದು. ನನಗೆ ಪ್ರೀತಿಪಾತ್ರವಾದದ್ದು. ಇದನ್ನು ಆಚರಿಸಿದವರಿಗೆ ಸರ್ವ ಸೌಭಾಗ್ಯಗಳೂ ಉಂಟಾಗುತ್ತದೆ. ಯಾವುದಕ್ಕೂ ಕೊರತೆಯಿರುವುದಿಲ್ಲ. ಜೀವನವು ಶುಭಪ್ರದವಾಗಿ ನಡೆಯುತ್ತದೆ. ಕೈಹಿಡಿದ ಕಾರ್ಯಗಳೆಲ್ಲವೂ ಜಯಪ್ರದವಾಗಿ ಜರುಗುತ್ತದೆ. ಈ ವ್ರತವನ್ನು ಸ್ತ್ರೀಯರಾಗಲೀ, ಪುರುಷರಾಗಲೀ ಯಾರಾದರೂ ಆಚರಿಸಬಹುದು. ಯಾವುದೇ ಶುಕ್ರವಾರದ ದಿನ ಸೂರ್ಯೋದಯಕ್ಕೆ ಮೊದಲೇ ಎದ್ದು, ಶುಚಿಯಾಗಿ ಸ್ನಾನಮಾಡಿ ಈ ವ್ರತವನ್ನು ಆರಂಭಿಸಬೇಕು. ಮೊದಲು ಅಷ್ಟೋತ್ತರಗಳನ್ನು ಪಠಿಸಬೇಕು. ಆನಂತರ ಈ ವ್ರತದಲ್ಲಿರುವ ಐದು ಕಥೆಗಳನ್ನು ಓದಬೇಕು. ಅಕ್ಕಿ, ಬೆಲ್ಲದಿಂದ ಮಾಡಿದ ಪಾಯಸವನ್ನು ನೈವೇದ್ಯವಿಡಬೇಕು. ನಿಮ್ಮ ಪೂಜಾಮಂದಿರದಲ್ಲಿ ಕುಳಿತುಕೊಂಡು ಆಚರಿಸಬಹುದು. ನನ್ನ ರೂಪವಾದ ವಿಜಯದುರ್ಗ, ಕನಕದುರ್ಗ, ಶೈಲಪುತ್ರಿ, ಗೌರಿದೇವಿ ಹೀಗೆ ಯಾವುದೇ ರೂಪದ ಚಿತ್ರಪಟವನ್ನು ಎದುರಲ್ಲಿ ಇಟ್ಟುಕೊಂಡಿರಬೇಕು. ಈ ವಿಧವಾಗಿ ವ್ರತವನ್ನು ಪೂರ್ತಿಮಾಡಿದ ಕೂಡಲೇ ನಿಮ್ಮ ಮನೆಯಲ್ಲಿ ಬಹಳ ಶುಭಗಳು ಉಂಟಾಗುತ್ತವೆ. ಈ ವ್ರತವು ಪೂರ್ತಿಯಾದ ನಂತರ, ನಾನು ಆ ಮನೆಗೆ ಯಾವುದೋ ಒಂದು ರೂಪದಿಂದ ಬಂದು ಪ್ರಸಾದವನ್ನು ಸ್ವೀಕರಿಸುತ್ತೇನೆ. ಓ ಕೋಮಲಾಂಬ! ನಾಳೆ ಶುಕ್ರವಾರ. ನಾಳೆಯೇ ಈ ವ್ರತವನ್ನು ಆಚರಿಸು. ನಿಮ್ಮ ಕುಟುಂಬಕ್ಕೆ ಸರ್ವ ಸೌಭಾಗ್ಯಗಳು ಉಂಟಾಗುತ್ತದೆ' ಎಂದು ತಾಯಿಯು ಅನುಗ್ರಹಿಸಿದಳು.

ಬೆಳಗಾದ ಕೂಡಲೇ ಕೋಮಲಾಂಬೆಯು ತನಗೆ ಬಂದ ಕನಸ್ಸಿನ ಬಗ್ಗೆ ತನ್ನ ಗಂಡನಿಗೆ ತಿಳಿಸಿದಳು. ಗಂಡನು ತುಂಬಾ ಸಂತೋಷಪಟ್ಟನು. ತಕ್ಷಣ ಕೋಮಲಾಂಬೆಯು ಶುಭ್ರವಾಗಿ ಸ್ನಾನ ಮಾಡಿ ಪೂಜಾಮಂದಿರದಲ್ಲಿ ಕುಳಿತುಕೊಂಡು ಶ್ರೀ ಶುಭದುರ್ಗಾ ವ್ರತವನ್ನು ಆಚರಿಸಿದಳು. ಪಾಯಸವನ್ನು ನಿವೇದಿಸಿದಳು. ಪಕ್ಕದ ಮನೆಯ ತನ್ನ ಸ್ನೇಹಿತೆಯನ್ನು ಕರೆದು ಊಟ ಬಡಿಸಿದಳು. ತಾಂಬೂಲವನ್ನು ಕೊಟ್ಟಳು. ಆ ವ್ರತದ ಪ್ರಭಾವದಿಂದ ಆ ದಿನ ಸಾಯಂಕಾಲವೇ ಒಂದು ಅದ್ಭುತ ಜರುಗಿತು. ಪಕ್ಕದ ಊರಲ್ಲಿರುವ ಜಮೀನ್ದಾರನು ಒಂದು

ದೊಡ್ಡ ದೇವಾಲಯವನ್ನು ಕಟ್ಟಿಸುತ್ತಿದ್ದಾನೆಂದು, ಆ ದೇವಾಲಯಕ್ಕೆ ಅರ್ಚಕನಾಗಿ ರಾಮಾಚಾರಿಯನ್ನು ನೇಮಕ ಮಾಡಬೇಕೆಂದು ಆಲೋಚಿಸಿದ್ದಾನೆಂಬ ವಿಷಯವನ್ನು ಹೇಳಿ ಕಳುಹಿದನು. ಅಷ್ಟೇ ಅಲ್ಲಾ, ಮರುದಿನವೇ ಬಂದು ರಾಮಾಚಾರಿಗೆ ದೇವಾಲಯದ ನಿರ್ಮಾಣಕ್ಕೆ ಸಂಬಂಧಿಸಿದ ವಿಷಯಗಳನ್ನು ನೋಡಬೇಕೆಂದು ಹೇಳಿದನು. ಶ್ರೀ ಶುಭದುರ್ಗಾ ಮಾತೆಯ ಅನುಗ್ರಹದಿಂದ ಆ ಜಮೀನ್ದಾರನು ರಾಮಾಚಾರಿಗೆ ಬಹಳಷ್ಟು ಹೆಚ್ಚಿನ ಸಂಬಳವನ್ನು ಕೊಟ್ಟನು. ತ್ವರಿತದಲ್ಲೇ ಆ ಕುಟುಂಬದ ಕಷ್ಟಗಳೆಲ್ಲಾ ಕೊನೆಗೊಂಡಿತು. ಹೆಣ್ಣುಮಕ್ಕಳಿಬ್ಬರಿಗೂ ಉತ್ತಮ ವರ ಸಿಕ್ಕಿ, ಇವರ ವಿವಾಹವೂ ಬಹಳ ವಿಜೃಂಭಣೆಯಿಂದ ಜರುಗಿತು. ಆ ಕುಟುಂಬವು ಪ್ರತಿ ತಿಂಗಳೂ ಅನುಕೂಲವಾದ ಶುಕ್ರವಾರದ ದಿನ ಶ್ರೀ ಶುಭದುರ್ಗಾ ವ್ರತವನ್ನು ಆಚರಿಸುತ್ತಾ ಶಾಶ್ವತವಾದ ಸುಖದಿಂದ ಜೀವಿಸಿದರು.

ಪ್ರಥಮ ಅಧ್ಯಾಯವು ಸಂಪೂರ್ಣವಾಯಿತು
ಯಾ ದೇವಿ ಸರ್ವಭೂತೇಷು ಮಾತೃರೂಪೇಣಸಂಸ್ಥಿತಃ |
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ||
********

ಎರಡನೇ ಅಧ್ಯಾಯ

## ಜಮೀನುದಾರನ ಕಥೆ

ಪೂರ್ವಕಾಲದಲ್ಲಿ ಗೋದಾವರೀ ನದೀತೀರದಲ್ಲಿ ದುರ್ಗಾಪುರಂವೆಂಬ ಗ್ರಾಮವಿತ್ತು. ಆ ಊರಲ್ಲಿ ರಾಘವಯ್ಯನೆಂಬ ಜಮೀನುದಾರನು ಇದ್ದನು. ಅವನಿಗೆ ಅನೇಕ ವ್ಯಾಪಾರಗಳಿತ್ತು. ತುಂಬಾ ಧನ ಸಂಪಾದನೆ, ಪಶು ಸಂಪಾದನೆಯಿತ್ತು. ಅನೇಕ ಹೊಲಗದ್ದೆಗಳೂ ಇತ್ತು. ರಾಘವಯ್ಯನಿಗೆ ತಾನು ಧನಿಕನೆಂದು ಅಹಂಕಾರವಿತ್ತು. ಯಾರಿಗಾದರೂ ಈ ಅಹಂಕಾರವೇ ಅಲ್ವಾ ಅಧೋಪಾತಾಳಕ್ಕೆ ತಳ್ಳುವುದು? ಆದರೆ ಅವನ ಹೆಂಡತಿ ಶ್ರೀದೇವಿ ಮಾತ್ರ ತುಂಬಾ ಸೌಮ್ಯಸ್ವಭಾವದವಳು. ಯಾವಾಗಲೂ ಪೂಜೆಯಲ್ಲಿಯೇ ಮುಳುಗಿರುತ್ತಿದ್ದಳು. ಗಂಡನಿಗೆ ತಿಳಿಯದ ಹಾಗೆ ಬಹಳ ದಾನಧರ್ಮಗಳನ್ನು ಮಾಡುತ್ತಿದ್ದಳು. ಅವರಿಗೆ ಎಲ್ಲಾ ಇದ್ದರೂ, ಸಂತಾನಭಾಗ್ಯವಿಲ್ಲದೇ ಜೀವನ ನೀರಸವಾಗಿತ್ತು.

ಆ ಊರಲ್ಲಿ ಬಹಳ ಪುರಾತನವಾದ ಶ್ರೀ ದುರ್ಗಾಮಾತೆಯ ದೇವಾಲಯವಿತ್ತು. ಆ ದೇವಾಲಯದಲ್ಲಿ ಪ್ರತಿವರುಷ ಅಶ್ವಯುಜ ಮಾಸದಲ್ಲಿ ನವರಾತ್ರಿ ಉತ್ಸವಗಳನ್ನು ಬಹಳ ವಿಜೃಂಭಣೆಯಿಂದ ನಿರ್ವಹಿಸುತ್ತಿದ್ದರು. ಆ ಉತ್ಸವಕ್ಕೆ ಸುತ್ತಮುತ್ತಲಿನ ಗ್ರಾಮಗಳಿಂದ ಬಹಳ ಭಕ್ತರು ಬರುತ್ತಿದ್ದರು. ಉತ್ಸವದ ನಿರ್ವಹಣೆಗೆ ಅನೇಕ ಧನಿಕರು ದೊಡ್ಡ ಪ್ರಮಾಣದಲ್ಲಿ ದೇಣಿಗೆ ನೀಡುತ್ತಿದ್ದರು. ಆದರೆ ಆ ದೇವಾಲಯದ ಧರ್ಮಕರ್ತ ಮಂಡಳಿಯ ಅಧ್ಯಕ್ಷ ರಾಘವಯ್ಯ ಮಾತ್ರ ಅಲ್ಪ ಮೊತ್ತದ ದೇಣಿಗೆ ಕೊಡುತ್ತಿದ್ದನು. ಅದುಕೂಡಾ ಏನೋ ಕಡ್ಡಾಯವಾಗಿ ಕೊಡಬೇಕಾದುದರಿಂದ ಕೊಡುತ್ತಿದ್ದ. ಅವನು ಅಧ್ಯಕ್ಷಸ್ಥಾನದಲ್ಲಿರುವುದು ಯಾರಿಗೂ ಇಷ್ಟವಿಲ್ಲದಿದ್ದರೂ, ಊರಲ್ಲಿ ಎಲ್ಲರಿಗಿಂತಲೂ ಹೆಚ್ಚಿನ ಧನಿಕನಾದ್ದರಿಂದ, ಅವನನ್ನೇ ಯಾವಾಗಲೂ ಅಧ್ಯಕ್ಷನಾಗಿ ಆಯ್ಕೆಮಾಡುತ್ತಿದ್ದರು. ಹಿಂದಿನ ಕೆಲವು ವರುಷಗಳಿಂದ ನವರಾತ್ರಿ ಉತ್ಸವಗಳಿಗೆ ಬರುವ ಚಂದಾದಾರಿಕೆಯ ಹಣವನ್ನು ಕೂಡಾ ತನ್ನ ಸ್ವಂತ ಕೆಲಸಗಳಿಗೆ ಉಪಯೋಗಿಸುತ್ತಿದ್ದಾನೆಂದು ಪ್ರಜೆಗಳು ಅನುಮಾನಪಡುತ್ತಿದ್ದರು. ಆದರೆ

ರಾಘವಯ್ಯನು ಇವನ್ನೆಲ್ಲ ತಲೆಗೆ ಹಚ್ಚಿಕೊಳ್ಳದೇ ಭಕ್ತರು ಕೊಟ್ಟ ಹಣವನ್ನು ದುರ್ವಿನಿಯೋಗ ಮಾಡುತ್ತಿದ್ದನು.

ಹೀಗಿರುವಾಗ, ಆ ಸಂವತ್ಸರದ ಉತ್ಸವಗಳು ಬಹಳ ವಿಜೃಂಭಣೆಯಿಂದ ಜರುಗಿತು. ಹೊಲಗದ್ದೆಗಳಲ್ಲಿ ಬೆಳೆಗಳು ಸಮೃದ್ಧವಾಗಿ ಬೆಳೆದುದರಿಂದ ರೈತರು ದೇಣಿಗೆಯಾಗಿ ತುಂಬಾ ಹೆಚ್ಚಿನ ಹಣವನ್ನು ಕೊಟ್ಟರು. ಅಷ್ಟು ಹಣವನ್ನು ನೋಡುವಾಗ ಜಮೀನುದಾರನಿಗೆ ಆಶೆ ಹುಟ್ಟಿತು. ಅದರಿಂದ ಸ್ವಲ್ಪ ಮಾತ್ರ ಉತ್ಸವಗಳಿಗೆ ಖರ್ಚು ಮಾಡಿ, ತುಂಬಾ ಹಣವನ್ನು ತನ್ನ ವ್ಯಾಪಾರಗಳಿಗೆ ಹಾಕಿದನು. ಹೀಗೆ ಕೆಲವು ಸಂವತ್ಸಗಳು ಜಗನ್ಮಾತೆಯ ಹಣವನ್ನು ದುರ್ವಿನಿಯೋಗ ಮಾಡುವುದರಿಂದ ಆ ತಾಯಿಗೆ ಕೋಪ ಉಂಟಾಯಿತು. ಅಷ್ಟೇ! ನವರಾತ್ರಿ ಮುಗಿದ ಮರುದಿನವೇ ಜಮೀನುದಾರನಿಗೆ ಪಾರ್ಶ್ವವಾಯು ಬಡಿದು, ಮಂಚ ಹಿಡಿದನು. ಹೆಂಡತಿ ಶ್ರೀದೇವಿಗೆ ಬಹಳ ಬಾಧೆ ಉಂಟಾಯಿತು. ತನ್ನ ಗಂಡ ಮಾಡಿದ ಅನ್ಯಾಯದಿಂದ ಹೀಗೆ ಅನಾರೋಗ್ಯ ಅನುಭವಿಸುತ್ತಿದ್ದಾನೆಂದು ತಿಳಿದಳು.

ಅನಾರೋಗ್ಯ ಮಾತ್ರವಲ್ಲ, ಮುಂದಿನ ತಿಂಗಳಲ್ಲಿ ವ್ಯಾಪಾರದಲ್ಲಿ ವಿಪರೀತವಾದ ನಷ್ಟ ಉಂಟಾಯಿತು. ಅಕಾಲವರ್ಷ ಸುರಿದು ಬೆಳೆಗಳಲ್ಲಿ ತುಂಬಾ ನಷ್ಟ ಉಂಟಾಯಿತು. ವ್ಯಾಪಾರದಲ್ಲಿ ನಷ್ಟ ಬಂದುದರಿಂದ ರಾಘವಯ್ಯನು ತುಂಬಾ ಸಾಲಗಳನ್ನು ಮಾಡಿದನು. ಅವನ್ನು ತೀರಿಸಲು ಸ್ವಲ್ಪ ಸ್ವಲ್ಪ ಹೊಲಗದ್ದೆಗಳನ್ನು ಮಾರಬೇಕಾಯಿತು. ಹೀಗೆ ಎರಡು ಸಂವತ್ಸರಗಳನ್ನು ಕಳೆದಾಗ, ಅವನ ಹತ್ತಿರ ಕೇವಲ ಎರಡೇ ಎರಡು ಎಕರೆ ಉಳಿಯಿತು. ಎಷ್ಟು ಔಷಧಿಗಳನ್ನು ಮಾಡಿದರೂ ಲಾಭವಿಲ್ಲದೇ ಮಂಚದ ಮೇಲೆಯೇ ಇದ್ದಾನೆ. ಹೆಂಡತಿ ಶ್ರೀದೇವಿಯು ತಮ್ಮನ್ನು ಈ ಕಷ್ಟಗಳಿಂದ ಹೊರತರಬೇಕೆಂದು ಎಷ್ಟೋ ದೇವರುಗಳಿಗೆ ಕೈಮುಗಿದಳು. ಈಗ ಜಮೀನುದಾರನಿಗೂ ತಿಳಿಯಿತು, ತಾನು ಜಗನ್ಮಾತೆಯ ಹಣವನ್ನು ದುರ್ವಿನಿಯೋಗವನ್ನು ಮಾಡಿದ್ದಕ್ಕೆ ಈ ಅನರ್ಥಗಳೆಲ್ಲವೂ ಜರುಗಿದ್ದೆಂದು ಗಮನಿಸಿದನು.

ಹೀಗಿರುವಾಗ, ಒಂದುದಿನ ಯಾರೋ ಸಾಧುವಿನಂತಹ ವ್ಯಕ್ತಿ ಮನೆ ಹೊರಗೆ ನಿಂತುಕೊಂಡು 'ಭವತಿ ಭಿಕ್ಷಾಂ ದೇಹಿ' ಎಂದು ಹೇಳಿದನು. ಸಮಯಕ್ಕೆ ಮನೆಯಲ್ಲಿ ಏನೂ ಇಲ್ಲದೇ ಶ್ರೀದೇವಿಯು ಒಂದು ಖರ್ಜೂರ ಹಣ್ಣನ್ನು ಅವನಿಗೆ ದಾನ ಮಾಡಿದಳು. ಕಣ್ಣೀರು ತೊಂಬಿಕೊಂಡಿರುವ ಆ ಹೆಣ್ಣುಮಗಳನ್ನು ನೋಡಿ ಆ ಸಾಧುವು 'ತಾಯಿ! ನಿನ್ನ ಕಷ್ಟಗಳೆಲ್ಲಾ ನನಗೆ ತಿಳಿಯಿತು. ನೀನು ‘ಶ್ರೀ ಶುಭದುರ್ಗಾ ವ್ರತ’ವನ್ನು ಮಾಡು. ಎಲ್ಲಾ ಸರಿಹೋಗುತ್ತದೆ. ನಿನ್ನ ಕಷ್ಟಗಳೆಲ್ಲಾ ಹೋಗಿ ಹಿಂದಿನ ವೈಭವು ಮರುಕಳಿಸುತ್ತದೆ' ಎಂದು ಹೇಳಿ ಆ ವ್ರತ ವಿಧಾನವನ್ನೆಲ್ಲಾ ವಿವರಿಸಿ ಹೇಳಿದನು. ಶ್ರೀದೇವಿಯು ಆ ಮರುದಿನವೇ ಶ್ರೀ ಶುಭದುರ್ಗಾ ವ್ರತವನ್ನು ಮಾಡುತ್ತೇನೆಂದು ಸಂಕಲ್ಪಿಸಿದಳು. ಇಷ್ಟರಲ್ಲಿ ಶ್ರೀದೇವಿಗೆ ಇನ್ನೊಂದು ಆಲೋಚನೆ ಕೂಡಾ ಬಂತು. ಈ ವ್ರತವನ್ನು ಒಂದು ತಿಂಗಳವರೆಗೆ ಪ್ರತಿದಿನ ಮಾಡುತ್ತೇನೆಂದು ನಿಶ್ಚಯಿಸಿದಳು.

ಜಮೀನುದಾರನ ಹೆಂಡತಿ ಶ್ರೀದೇವಿಯು ಮರುದಿನವೆ ಪ್ರಾರಂಭಿಸಿ ಬಹಳ ಶ್ರದ್ದೆಯಿಂದ ಒಂದು ತಿಂಗಳವರೆಗೆ ಶ್ರೀ ಶುಭದುರ್ಗಾ ವ್ರತವನ್ನು ಆಚರಿಸಿದಳು. ಪ್ರತಿದಿನ ಮುಂಜಾನೆದ್ದು ಸ್ನಾನವನ್ನು ಮಾಡಿ, ವ್ರತವನ್ನು ಮಾಡುತ್ತಿದ್ದಳು. ಹಾಗೆ ಒಂದು ತಿಂಗಳು ಮಾಡುವಾಗ, ಕೊನೆಯ ದಿನ ಶುಕ್ರವಾರದ ದಿನ ವ್ರತವು ಪೂರ್ತಿಯಾಗುವಾಗ, ಮನೆ ಮುಂದೆ ಯಾರೋ

ದಂಪತಿಗಳು ಕರೆಯುತ್ತಿರುವ ಹಾಗೆ ತಿಳಿದು ಹೊರಗೆ ಹೋದಳು. ಇಬ್ಬರು ಬ್ರಾಹ್ಮಣ ದಂಪತಿಗಳು ಕಾಣಿಸಿದರು. ಶ್ರೀದೇವಿಯೊಟ್ಟಿಗೆ ತಾವು ಪಕ್ಕದ ಊರಿಗೆ ಹೋಗುತ್ತಾ ಸ್ವಲ್ಪ ಊಟ ಸಿಕ್ಕಬಹುದೇನೋ ಎಂದು ಬಂದೆವೆಂದರು. ಶ್ರೀದೇವಿಯು ಅವರಿಗೆ ಊಟ ಬಡಿಸಿದಳು. ಆ ದಂಪತಿಗಳಿಬ್ಬರೂ ಸಂತೋಷದಿಂದ ಊಟ ಮಾಡಿದರು. ಶ್ರೀ ಶುಭದುರ್ಗಾ ವ್ರತ ಪ್ರಸಾದವನ್ನು ಕೂಡಾ ಸ್ವೀಕರಿಸಿದರು. ಅವರು ತಿರುಗಿ ಹೊರಟು, ಶ್ರೀದೇವಿಯ ಕೈಯಲ್ಲಿ ಒಂದು ಚಿಕ್ಕ ಮೂಟೆಯನ್ನು ಇಟ್ಟು ತಾಯಿ! ಇದು ಸ್ವಲ್ಪ ಹಣ. ನಾವು ಹೊರಟ ನಂತರ ತೆಗೆದು ನೋಡು' ಎಂದು ಹೇಳಿ ಹೊರಟುಹೋದರು.

ಅವರು ಹೋದ ಸ್ವಲ್ಪ ಹೊತ್ತಿನಲ್ಲೇ ಮೂಟೆ ಬಿಚ್ಚಿ ನೋಡಿದ ಶ್ರೀದೇವಿಯು ಆಶ್ಚರ್ಯಹೊಂದಿದಳು. ಆ ಮೂಟೆಯ ತುಂಬಾ ಬಂಗಾರದ ಕಾಸುಗಳು! ಅಷ್ಟೇ ಅಲ್ಲ, ಆ ಮೂಟೆಯಲ್ಲಿ ಒಂದು ಚಿಕ್ಕ ಶಿವಲಿಂಗ, ಒಂದು ಚಿಕ್ಕ ಅಮ್ಮನವರ ವಿಗ್ರಹವು ಇದೆ. ಆಹಾ! ಸಾಕ್ಷಾತ್ ಆ ಆದಿದಂಪತಿಗಳೇ ತನ್ನನ್ನು ಆಶೀರ್ವದಿಸಿದರೆಂದು ಗ್ರಹಿಸಿದಳು. ಪ್ರಸಾದವನ್ನು ಸ್ವೀಕರಿಸಲು ಆ ಪಾರ್ವತೀ ಪರಮೇಶ್ವರರು ಬ್ರಾಹ್ಮಣ ದಂಪತಿಗಳ ರೂಪದಲ್ಲಿ ಬಂದರೆಂದು ಊಹಿಸಿ, ಅವಳು ಬಹಳ ಆನಂದಪಟ್ಟಳು. ಅವರ ಅನುಗ್ರಹದಿಂದ ಕೆಲವು ದಿನಗಳಲ್ಲೇ ಆ ಜಮೀನುದಾರನು ಕೂಡಾ ಪೂರ್ತಿಯಾಗಿ ಆರೋಗ್ಯವಂತನಾದನು. ಮೆಲ್ಲ ಮೆಲ್ಲನೇ ಸಂವತ್ಸರದಲ್ಲೇ ತಿರುಗಿ ಹಿಂದಿಗಿಂತಲೂ ಧನವಂತನಾದನು. ಜಮೀನುದಾರನಲ್ಲಿ ತುಂಬಾ ಬದಲಾವಣೆ ಬಂತು. ದೇವಾಲಯಕ್ಕೆ ಚಿನ್ನದ ಹೊದಿಕೆಯನ್ನು ಮಾಡಿಸಿದನು. ಮುಂದೆ ಸನ್ಮಾರ್ಗದಲ್ಲಿ ಜೀವಿಸಿ, ಬಹು ಅಲ್ಪಕಾಲದಲ್ಲೇ ಸುತ್ತಮುತ್ತಲಿನ ಗ್ರಾಮದಲ್ಲಿ ಇವನಂತಹ ದೊಡ್ಡ ಧರ್ಮಾತ್ಮರು ಇಲ್ಲವೆಂದು ಹೆಸರು ಪಡೆದುಕೊಂಡನು. ರಾಘವಯ್ಯ, ಶ್ರೀದೇವಿ ದಂಪತಿಗಳಿಬ್ಬರೂ ಇದ್ದಷ್ಟು ದಿನ ಆ ಜಗನ್ಮಾತೆಯನ್ನು ಸೇವಿಸುತ್ತಾ ಸುಖದಿಂದ ಜೀವಿಸಿ ಕೊನೆಗೆ ಮುಕ್ತಿಯನ್ನು ಹೊಂದಿದರು.

ಎರಡನೇ ಅಧ್ಯಾಯವು ಸಂಪೂರ್ಣವಾಯಿತು
ಯಾ ದೇವಿ ಸರ್ವಭೂತೇಷು ಮಾತೃರೂಪೇಣಸಂಸ್ಥಿತಃ |
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ||

********

## ಮೂರನೇ ಅಧ್ಯಾಯ
## **ಅವಳಿಮಕ್ಕಳ ಕಥೆ**

ಪೂರ್ವಕಾಲದಲ್ಲಿ ಆಂಧ್ರಪ್ರದೇಶದ ಶ್ರೀಶೈಲ ಪುಣ್ಯಕ್ಷೇತ್ರದ ಹತ್ತಿರ ವೀರಭದ್ರಪುರಂ ಎಂಬ ಗ್ರಾಮವಿತ್ತು. ಆ ಗ್ರಾಮದಲ್ಲಿ ರಾಮಯ್ಯನೆಂಬ ಬಡಗಿ ಇದ್ದನು. ಅವನು ಚಿಕ್ಕ ಚಿಕ್ಕ ಬಡಗಿ ಕೆಲಸಗಳನ್ನು ಮಾಡುತ್ತಾ ಕಾಲಕಳೆಯುತ್ತಿದ್ದನು. ಅವನ ಹೆಂಡತಿ ಸುಮತಿಯು ರಾಮಯ್ಯನಿಗೆ ತಕ್ಕ ಜೋಡಿಯಾಗಿದ್ದಳು. ಆ ದಂಪತಿಗಳಿಗೆ ತಂದೆಯಿಂದ ಬಂದ ಉತ್ತರಾಧಿಕಾರದ ಮನೆಯಿತ್ತು. ಅದರಲ್ಲಿ ನಿವಾಸಮಾಡುತ್ತಾ ಇದ್ದುದರಲ್ಲಿ ತೃಪ್ತಿಯಿಂದ ಜೀವಿಸುತ್ತಿದ್ದರು. ಆದರೆ ಅವರಿಗೆ ಮದುವೆಯಾಗಿ ಹನ್ನೆರಡು ಸಂವತ್ಸರಗಳು ಕಳೆದರೂ ಸಂತಾನಭಾಗ್ಯ ಉಂಟಾಗಲಿಲ್ಲ. ಇದು ಅವರಿಗೆ ದೊಡ್ಡ ನೋವುಂಟುಮಾಡುತ್ತಿತ್ತು. ಸಂತಾನಕ್ಕಾಗಿ ಸುಮತಿಯು ಎಷ್ಟೋ ಪೂಜೆಗಳನ್ನು ಮಾಡಿದಳು. ಆದರೂ ಫಲಿತವಿಲ್ಲದೇ ಹೋಯಿತು. ಇದು ಅವರ ಮನಸ್ಸನ್ನು ಯಾವಾಗಲೂ ಬಾಧಿಸುತ್ತಿತ್ತು.

ಹೀಗೆ ದಿನಗಳು ಕಳೆಯುತ್ತಿರುವಾಗ, ಒಂದುದಿನ ರಾಮಯ್ಯನು ಬಡಗಿ ಕೆಲಸದ ನಿಮಿತ್ತ ನೆರೆಗ್ರಾಮ ಕೃಷ್ಣಾಪುರಕ್ಕೆ ಹೋದನು. ಅಲ್ಲಿ ಒಬ್ಬರು ಹೊಸ ಮನೆಯನ್ನು ಕಟ್ಟಿಸುತ್ತಾ, ಬಡಗಿ ಕೆಲಸವನ್ನೆಲ್ಲಾ ರಾಮಯ್ಯನಿಗೆ ಒಪ್ಪಿಸಿದರು. ಕೆಲಸವೆಲ್ಲ ಮುಗಿದು ಗೃಹಪ್ರವೇಶ ಮಾಡುವ ದಿನ ಬಂತು. ಗೃಹಪ್ರವೇಶಕ್ಕೆ ರಾಮಯ್ಯ ದಂಪತಿಗಳನ್ನು ಕೂಡಾ ಆ ಮನೆಯ ಯಜಮಾನನು ಆಹ್ವಾನಿಸಿದನು. ಆ ದಿನ ಮನೆ ದಂಪತಿಗಳಿಬ್ಬರೂ 'ಶ್ರೀ ಶುಭದುರ್ಗಾ ವ್ರತ'ವನ್ನು ಮಾಡುವುದನ್ನು ಸುಮತಿಯು ಗಮನಿಸಿದಳು. ಈ ವ್ರತವನ್ನು ತಾನು ಯಾವಾಗಲೂ ಕೇಳಿರಲಿಲ್ಲ. ಈ ವ್ರತದ ವಿಷಯವಾಗಿ ಆ ಮನೆಯ ಯಜಮಾನನ ಹೆಂಡತಿಯನ್ನು ಕೇಳಿದಳು. ಈ ವ್ರತವು ಅವರ ಮನೆಯಲ್ಲಿ ಹಿಂದಿನಿಂದಲು ಹಿರಿಯರು ಸಂಪ್ರದಾಯವಾಗಿ ಮಾಡುತ್ತಿದ್ದರು ಮತ್ತು ಈ ವ್ರತವನ್ನು ಆಚರಿಸಬಹುದೆಂದು, ಅನೇಕ ಶುಭಗಳು ಜರುಗುತ್ತದೆಯೆಂದು ಮನೆ ಯಜಮಾನನ ಹೆಂಡತಿ ಹೇಳಿದಳು. ಸುಮತಿಯು ಅವಳಿಂದ ಶ್ರೀ ಶುಭದುರ್ಗಾ ವ್ರತ ವಿಧಾನವನ್ನೆಲ್ಲಾ ವಿವರವಾಗಿ ತಿಳಿದುಕೊಂಡಳು.

ಕೆಲವು ದಿನಗಳು ಕಳೆದನಂತರ, ಒಂದು ಶುಕ್ರವಾರದ ದಿನ ಸುಮತಿಯು ಶ್ರೀ ಶುಭದುರ್ಗಾ ವ್ರತವನ್ನು ಆಚರಿಸಿದಳು. ತನಗೆ ಒಳ್ಳೆಯ ಸಂತಾನವನ್ನು ಪ್ರಸಾದಿಸೆಂದು ಆ ಜಗನ್ಮಾತೆಯನ್ನು ಬೇಡಿಕೊಂಡಳು. ಸಂತಾನವನ್ನು ಪಡೆದ ನಂತರ, ಮತ್ತೊಮ್ಮೆ ವ್ರತವನ್ನು ಮಾಡುತ್ತೇನೆಂದು ಸಂಕಲ್ಪ ಮಾಡಿಕೊಂಡಳು.  ಆ ವ್ರತದ ಫಲಿತವಾಗಿ ಆ ಬರುವ ತಿಂಗಳಿನಲ್ಲಿಯೇ ಗರ್ಭ ಧರಿಸಿ, ಒಂಬತ್ತು ತಿಂಗಳು ಪೂರ್ತಿಯಾದಾಗ, ಮುದ್ದಾದ ಅವಳಿಮಕ್ಕಳನ್ನು ಹಡೆದಳು. ಮಕ್ಕಳಿಬ್ಬರಿಗೂ ರಾಮಕೃಷ್ಣರೆಂದು ಹೆಸರಿಟ್ಟರು. ಮಕ್ಕಳಿಬ್ಬರೂ ಮುದ್ದಾಗಿ ಬೆಳೆದು ಮೂರು ವರ್ಷದ ವಯಸ್ಸಿಗೆ ಬಂದರು. ಸುಮತಿಯು ಶ್ರೀ ಶುಭದುರ್ಗಾ ವ್ರತವನ್ನು ಮಾಡುವುದನ್ನು ಮರೆತುಬಿಟ್ಟಳು. ಮಕ್ಕಳು ಹುಟ್ಟಿದ ನಂತರ  ಬಂಧುಗಳನ್ನೆಲ್ಲಾ ಕರೆದು ವೈಭವವಾಗಿ ವ್ರತವನ್ನು ಮಾಡುತ್ತೇನೆಂಬ ಸಂಕಲ್ಪವು ನೆರವೇರದಿದ್ದುದರಿಂದ ದುರ್ಗಾದೇವಿಗೆ ಕೋಪ ಬಂತು. ಒಂದು ಸಂವತ್ಸರ ಹೋಗಿ, ಮೂರು ಸಂವತ್ಸರವಾದರೂ ಅವಳು ಈ ವ್ರತವನ್ನು ಮಾಡದಿರುವುದರಿಂದ ಸುಮತಿಯ ಮೇಲೆ ಕೋಪ ಉಂಟಾಯಿತು.

ಒಂದು ದಿನ ಮನೆ ಹೊರಗೆ ಆಟವಾಡಿಕೊಂಡಿರುವ ಮಕ್ಕಳಿಬ್ಬರೂ ಕಾಣೆಯಾದರು. ರಾಮಯ್ಯ, ಸುಮತಿಯು ಊರೆಲ್ಲಾ ಎಷ್ಟು ಹುಡುಕಿದರೂ ಕಾಣಸಿಗಲಿಲ್ಲ. ಹುಟ್ಟದೇ ಹುಟ್ಟಿದ ಮಕ್ಕಳು ಏನಾದರೋ ಎಂದು ಬಾಧೆಪಟ್ಟರು. ತಾವು ಯಾವ ಪಾಪವನ್ನು ಮಾಡಿರುತ್ತೇವೋ ಎಂದುಕೊಂಡು ಬಹಳ ಕುಗ್ಗಿಹೋದರು. ತಾನು ಶ್ರೀ ಶುಭದುರ್ಗಾ ವ್ರತ ಮಾಡುವುದನ್ನು ಮರೆತದ್ದು ಜ್ಞಾಪಕಕ್ಕೆ ಬಂತು. ಆದ್ದರಿಂದಲೇ ಮಕ್ಕಳು ಕಾಣೆಯಾದರೆಂದು ತಿಳಿದಳು. ಆ ಮರುದಿನ ಶುಕ್ರವಾರವೇ. ನಾಳೆ ಹೇಗಾದರೂ ಈ ವ್ರತವನ್ನು ಆಚರಿಸಬೇಕೆಂದು ಆ ದಂಪತಿಗಲ್ಲಿಬ್ಬರೂ ನಿಶ್ಚಯಿಸಿದರು. ಬಂಧುಮಿತ್ರರಿಗೆಲ್ಲಾ ಸಮಾಚಾರವನ್ನು ತಿಳಿಸಿದರು.

ಮಕ್ಕಳು ಕಾಣೆಯಾದದ್ದಕ್ಕೆ ಮನಸ್ಸಿನಲ್ಲಿ ಬಾಧೆಪಡುತ್ತಾ ರಾಮಯ್ಯ - ಸುಮತಿ ದಂಪತಿಗಳಿಬ್ಬರೂ ಮರುದಿನ ಶುಕ್ರವಾರ ಮುಂಜಾನೆದ್ದು ಶ್ರೀ ಶುಭದುರ್ಗಾ ವ್ರತವನ್ನು ಬಹಳ ಶ್ರದ್ಧೆಯಿಂದ ಆಚರಿಸಿದರು. ತಮ್ಮ ಮಕ್ಕಳ ಸುಳಿವು ಕೊಡೆಂದು ಆ ತಾಯಿಯನ್ನು ತುಂಬಾ ಬೇಡಿಕೊಂಡರು. ವ್ರತವು ಪೂರ್ತಿಯಾಗಿ ನಿವೇದನ ಜರುಗುತ್ತಿರುವ ಸಮಯದಲ್ಲಿ, ಇವರ ದೂರದ ಸಂಬಂಧಿ ಜಾನಕಮ್ಮ ಇಬ್ಬರು ಮಕ್ಕಳನ್ನು ಕರೆದುಕೊಂಡು ಒಳಗೆಬಂದಳು. ಅಲ್ಲಿದ್ದವರೆಲ್ಲಾ ತುಂಬಾ ಸಂತೋಷಪಟ್ಟರು. ಜಾನಕಮ್ಮ ರಾಮಯ್ಯನಿಗೆ ದೂರದ

ಬಂಧುವು. ಅವಳು ರಾಮಯ್ಯನೊಂದಿಗೆ ಮಾತನಾಡುತ್ತಾ, ಮುಂಜಾನೆ ಪಕ್ಕದೂರಿನ ದೇವಸ್ಥಾನಕ್ಕೆ ಯಾವುದೋ ಪೂಜೆಗಾಗಿ ಹೋಗಿ ಬರುವುದರಿಂದ ಇಲ್ಲಿಗೆ ಬರಲು ತಡವಾಯಿತು ಎಂದಳು. ಪಕ್ಕದೂರಿಂದ ಬರುತ್ತಿರುವಾಗ, ಒಂದು ಮರದ ಕೆಳಗೆ ರಾಮಕೃಷ್ಣರಿಬ್ಬರೂ ಕಾಣಿಸಿದರು ಎಂದಳು. ರಾಮಯ್ಯ ದಂಪತಿಗಳ ಸಂತೋಷಕ್ಕೆ ಕೊನೆಯಿಲ್ಲ. ಅವರು ಮಕ್ಕಳು ತಿರುಗಿ ಸಿಕ್ಕಿದಕ್ಕೆ ಬಹಳ ಸಂತೋಷಪಟ್ಟರು.

ಮಧ್ಯಾಹ್ನದ ಊಟವಾದ ಕೂಡಲೇ ಬಂಧುಗಳೆಲ್ಲರೂ ಹೊರಟೋದರು. ಜಾನಕಮ್ಮ ಕೂಡಾ ತನ್ನ ಮನೆಗೆ ಹೊರಡಲನುವಾದಳು. ತಮ್ಮ ಮಕ್ಕಳನ್ನು ತಿರುಗಿ ಕರೆದುಕೊಂಡು ಬಂದದ್ದಕ್ಕೆ ರಾಮಯ್ಯ ದಂಪತಿಗಳು ಅವಳಿಗೆ ಕೃತಜ್ಞತೆಗಳನ್ನು ತಿಳಿಸಿ, ಸೀರೆ ಕುಪ್ಪಸವನ್ನು ಕೊಟ್ಟು ಗೌರವಿಸಿದರು. ಅದನ್ನು ತೆಗೆದುಕೊಂಡು ಜಾನಕ್ಕಮ್ಮ ಆ ದಂಪತಿಗಳನ್ನು ಆಶೀರ್ವಚಿಸಿ ಹೊರಟು ಹೋದಳು. ಆ ದಂಪತಿಗಳಿಬ್ಬರೂ ಮಕ್ಕಳಿಬ್ಬರೊಟ್ಟಿಗೆ ಸ್ವಲ್ಪಹೊತ್ತು ಹರಟೆ ಹೊಡೆದು, ಸ್ವಲ್ಪಸಮಯ ವಿಶ್ರಮಿಸಿದರು. ಇಷ್ಟರಲ್ಲಿ ಸಾಯಂಕಾಲ ಐದು ಗಂಟೆಯಾಯಿತು. ಯಾರೋ ಮನೆಬಾಗಿಲು ಬಡಿದರೆ, ಸುಮತಿಯು ಹೋಗಿ ಬಾಗಿಲು ತೆರೆದಳು. ಜಾನಕಮ್ಮ ತಿರುಗಿ ಬಂದಿದ್ದಾಳೆ! ಸುಮತಿಯು ಆಕೆಯೊಂದಿಗೆ 'ಏನತ್ತೆ! ಏನಾದರೂ ಮರೆತುಬಿಟ್ಟಿದ್ದೀಯಾ ಮತ್ತೆ ಬಂದಿದ್ದಿ' ಎಂದು ಕೇಳಿದಳು. ಆಗ ಅವಳು ಆಶ್ಚರ್ಯದಿಂದ 'ಮತ್ತೆ ಬರುವುದೇನು, ಅಸಲು ನಾನು ವ್ರತಕ್ಕೆ ಬಂದರೆ ಅಲ್ವಾ! ನಿನ್ನೆಯೇ ಬೇರೆ ಊರಿಗೆ ಹೊದ್ದದ್ದರಿಂದ, ಈಗಲೇ ಮನೆಗೆ ಬಂದೆನು. ಬೆಳಿಗ್ಗೆ ನೀನು ವ್ರತವನ್ನು ಮಾಡಿದ್ದಿ ಎಂದು ತಿಳಿದು ಪ್ರಸಾದವನ್ನಾದರೂ ತೆಗೆದುಕೊಳ್ಳೋಣವೆಂದು ಬಂದೆನು' ಎಂದು ಹೇಳಿದಳು. ಇದನ್ನು ಕೇಳಿದ ಸುಮತಿಯು ಆಶ್ಚರ್ಯಪಟ್ಟಳು. ಜರುಗಿದ ವಿಷಯವು ಅರ್ಥವಾಯಿತು. ಬೆಳಿಗ್ಗೆ ಜಾನಕಮ್ಮನ ರೂಪದಲ್ಲಿ ಬಂದದ್ದು ಸಾಕ್ಷಾತ್ ಶ್ರೀ ಶುಭದುರ್ಗಾ ದೇವಿಯೇ ಎಂದು ತಿಳಿದಳು. ತಾಯಿ! ನಿನ್ನ ಗುರುತನ್ನು ತಿಳಿಯದೇ ಹೋದೆನು. ಮಕ್ಕಲ್ಲಿಬ್ಬರನ್ನು ಕರೆದುತರುವುದಲ್ಲದೇ ತಾಂಬೂಲವನ್ನು ಕೂಡಾ ತೆಗೆದುಕೊಂಡು ಹೋದೆ. ನಿನಗೆ ಭಕ್ತರೆಂದರೆ ಎಂಥಹ ಕರುಣೆ ತಾಯಿ, ಎಂದು ಆ ಜಗನ್ಮಾತೆಯನ್ನು ಪರಿಪರಿವಿಧಾನಗಳಿಂದ ಸ್ತುತಿಸಿದಳು. ಜರುಗಿದ್ದೆಲ್ಲಾ ತಿಳಿದುಕೊಂಡು ಜಾನಕಮ್ಮ ಕೂಡ ತುಂಬಾ ಆಶ್ಚರ್ಯಪಟ್ಟಳು. ಆಗಿನಿಂದ ರಾಮಯ್ಯ, ಸುಮತಿ ದಂಪತಿಗಳಿಬ್ಬರೂ ಪ್ರತಿ ತಿಂಗಳೂ ಶ್ರೀ ಶುಭದುರ್ಗಾ ವ್ರತವನ್ನು ಆಚರಿಸುತ್ತಾ, ಬದುಕ್ಕಿದಷ್ಟು ದಿನಗಳು ಶಾಶ್ವತವಾದ ಸುಖದಿಂದ ಜೀವಿಸಿದರು.

ಮೂರನೇ ಅಧ್ಯಾಯವು ಸಂಪೂರ್ಣವಾಯಿತು
ಯಾ ದೇವಿ ಸರ್ವಭೂತೇಷು ಮಾತೃರೂಪೇಣಸಂಸ್ಥಿತಃ |
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ||
********

ನಾಲ್ಕನೇ ಅಧ್ಯಾಯ

## ಅನ್ನಪೂರ್ಣಮ್ಮ ಕಥೆ

ಪೂರ್ವಕಾಲದಲ್ಲಿ ಕಾವೇರೀ ನದಿತೀರದಲ್ಲಿ ಕೃಷ್ಣ ಶರ್ಮ ಎಂಬ ಸದ್ಬ್ರಾಹ್ಮಣನು ಇದ್ದನು. ಅವನು ಅನೇಕ ಶಾಸ್ತ್ರಗಳಲ್ಲಿ ಬಹಳ ಪಾಂಡಿತ್ಯವನ್ನು ಸಂಪಾದಿಸಿ, ಆ ಊರಲ್ಲಿರುವ ವೇದ ಪಾಠಶಾಲೆಯಲ್ಲಿ ಉಪಾಧ್ಯಾಯನಾಗಿ ಕೆಲಸಮಾಡುತ್ತಿದ್ದ. ಅವನ ಹೆಂಡತಿ ಅನ್ನಪೂರ್ಣಾಮ್ಮ ಒಳ್ಳೆಯ ಗುಣವಂತೆ. ಕೃಷ್ಣ ಶರ್ಮನಿಗೆ ಇಬ್ಬರು ಗಂಡುಮಕ್ಕಳು. ಆ

ಇಬ್ಬರೂ, ಆ ವೇದ ಪಾಠಶಾಲೆಯಲ್ಲೇ ಓದುತ್ತಿದ್ದರು. ಕೃಷ್ಣ ಶರ್ಮನ ಹೆಂಡತಿ ಅನ್ನಪೂರ್ಣಾಮ್ಮ ಹೆಸರಿಗೆ ತಕ್ಕಂತೆ ಮನೆಗೆ ಬಂದವರಿಗೆಲ್ಲಾ ತುಂಬಾ ಉಪಚಾರ ಮಾಡುತ್ತಿದ್ದಳು. ಯಾವ ಸಮಯದಲ್ಲೇ ಆಗಲೀ ಬಂದ ಅತಿಥಿಗೆ ಊಟಬಡಿಸದೆ ಕಳಿಸುತ್ತಿರಲಿಲ್ಲ. ಗಂಡ - ಹೆಂಡತಿಗೆ ದಯಾಗುಣವಿರುವುದರಿಂದ, ಆ ಮನೆಗೆ ಬಂದವರಿಗೆ, ಅತಿಥಿ ಮರ್ಯಾದೆಯಲ್ಲಿ ಕುಂದಿರಲಿಲ್ಲ. ಯಾವುದಾದರೂ ಸಲಹೆಗಳ ನಿಮಿತ್ತ ಕೃಷ್ಣ ಶರ್ಮನ ಹತ್ತಿರ ಬಂದವರಿಗೂ ಕೂಡಾ ಅನ್ನಪೂರ್ಣಾಮ್ಮ ಊಟ ಬಡಿಸಿ ಕಳಿಸುತ್ತಿದ್ದಳು.

ದಿನಗಳು ಹೀಗೆ ಉರುಳುತ್ತಿರುವಾಗ, ಅನ್ನಪೂರ್ಣಾಮ್ಮನಿಗೆ ಬಲಗಾಲು ತುಂಬಾ ನೋವುಂಟು ಮಾಡಿತು. ಹೆಜ್ಜೆಯಿಟ್ಟು ಹೆಜ್ಜೆ ಹಾಕುವುದು ಕಷ್ಟವಾಯಿತು. ಊರಲ್ಲಿರುವ ವೈದ್ಯನಿಗೆ ತೋರಿಸಿದರೆ, ಕೆಲವು ಮದ್ದುಗಳನ್ನು ಕೊಟ್ಟನು. ಎರಡು ತಿಂಗಳು ಮದ್ದು ಬಳಸಿದರೂ ಅಂತಹ ಪ್ರಯೋಜನವಾಗಲಿಲ್ಲ. ಅನ್ನಪೂರ್ಣಾಮ್ಮನಿಗೆ ದಿನಾಲೂ ಕತ್ತಲಿರುವಾಗಲೇ ನಿದ್ರೆಯಿಂದ ಎದ್ದು ಬಾವಿಯಿಂದ ನೀರು ಸೇದಿ ತಣ್ಣನೆಯ ನೀರಿನಿಂದ ಸ್ನಾನಮಾಡುವ ಅಭ್ಯಾಸವಿತ್ತು. ಮಡಿಯಿಂದಲೇ ಅಡುಗೆ ತಯಾರಿಸಿ, ಪ್ರತಿದಿನ ದುರ್ಗಾಮಾತೆಗೆ ಪೂಜೆಮಾಡಿ ನೈವೇದ್ಯವನ್ನು ಇಡುತ್ತಿದ್ದಳು. ಪ್ರತಿದಿನ ತಪ್ಪದೇ ತಾಯಿಗೆ ನಿವೇದನ ಮಾಡುತ್ತಿದ್ದಳು. ಈ ಕಾಲುನೋವು ಬಂದಿದ್ದರಿಂದ ಮುಂಜಾನೆ ಕತ್ತಲೆ ಸಮಯದಲ್ಲೇ ಎದ್ದು ಕಾಲೆಳೆದುಕೊಂಡು ಬಾವಿಯ ಹತ್ತಿರ ಹೋಗಲು ಕಷ್ಟವಾಯಿತು. ಹೇಗೋ ಏನೋ ಕುಂಟುತ್ತಾ ಮಾಡುತ್ತಿದ್ದಾಳೆ.

ಹೀಗಿರುವಾಗ, ಒಂದುದಿನ ಬೆಳಗ್ಗಿನಜಾವ ಅನ್ನಪೂರ್ಣಮ್ಮ ಕತ್ತಲೆಯಲ್ಲೇ ನಡೆಯುವಾಗ ಕಾಲನ್ನು ಯಾವುದೋ ಕಲ್ಲಿನ ಮೇಲೆಯಿಟ್ಟು ಆಯತಪ್ಪಿ ಬಿದ್ದುಬಿಟ್ಟಳು. ಆಗ ಕಾಲಿಗೆ ತುಂಬಾ ನೋವಾಯಿತು. ವೈದ್ಯನು ಬಂದು ನೋಡಿ, ಎರಡು ತಿಂಗಳು ಮಂಚದ ಮೇಲೆಯೇ ಇರಬೇಕೆಂದನು. ಅನ್ನಪೂರ್ಣಮ್ಮನಿಗೆ ಸ್ವಲ್ಪ ಕೂಡಾ ಇಷ್ಟವಾಗಲಿಲ್ಲ. ಹೀಗೆ ಮಂಚಹಿಡಿದು ಕೂತರೆ, ಮನೆ ಕೆಲಸವನ್ನು ಮಾಡುವವರು ಯಾರು? ಗಂಡನಿಗೆ, ಮಕ್ಕಳಿಗೆ ಅವರ ಅವರ ಕೆಲಸಗಳು ಸರಿಹೋಗುತ್ತದೆ. ಜಗನ್ಮಾಥೆಗೆ ಮುಂಜಾನೆಯೇ ನೈವೇದ್ಯವನ್ನು ಯಾರು ಇಡುತ್ತಾರೆ ಎಂದು ತುಂಬಾ ಬಾಧೆಪಟ್ಟಳು. ಗಂಡನು ಅವಳಿಗೆ ಸಮಾಧಾನ ಹೇಳಿ ತಾನು ಮಡಿಮಾಡಿಕೊಂಡು ನೈವೇದ್ಯವನ್ನು ಇಡುತ್ತೇನೆಂದು ಹೇಳಿದನು.

ಕೃಷ್ಣ ಶರ್ಮನು ಹೆಂಡತಿಯ ನೋವು ನೋಡಲಾಗದೇ ಹಾಗೇ ಹೇಳಿದನು, ಆದರೆ ಅಡಿಗೆ ಮಾಡುವುದು ಅವನಿಂದಾಗಲಿಲ್ಲ. ಕೆಲಸವನ್ನೆಲ್ಲಾ ಮಾಡಿ ವೇದಪಾಠಶಾಲೆಗೆ ಹೋಗುವಷ್ಟರಲ್ಲಿ ಬಹಳ ತಡವಾಗುತ್ತಿತ್ತು. ಗಂಡನ ಪರಿಸ್ಥಿತಿಯನ್ನು ನೋಡಿ ಅನ್ನಪೂರ್ಣಮ್ಮ ಜಗನ್ಮಾತೆಯನ್ನು ತನ್ನ ಕಷ್ಟಗಳಿಂದ ತಕ್ಷಣ ನಿವಾರಣೆಮಾಡಿಸೆಂದು ಬೇಡಿಕೊಂಡಳು. ಒಂದುದಿನ ಬೆಳಿಗ್ಗೆ ಗಂಡನು, ಮಕ್ಕಳು ಪಾಠಶಾಲೆಗೆ ಹೋದಕೂಡಲೇ, ಒಂದು ಹತ್ತು ವರ್ಷದ ಹುಡುಗಿ ಇವರ ಮನೆಗೆ ಬಂದಳು. ಅನ್ನಪೂರ್ಣಮ್ಮ ಅವಳನ್ನು 'ಯಾರಮ್ಮಾ, ನೀನು ಯಾಕೆ ಬಂದೆ' ಎಂದು ಕೇಳಿದಳು. ಆಗ ಆ ಹುಡುಗಿಯು ಅನ್ನಪೂರ್ಣಮ್ಮನಿಗೆ 'ಅಮ್ಮಾ, ನಾನು ಪಕ್ಕದ ಊರಲ್ಲಿ ಇರುತ್ತೇನೆ. ನನ್ನ ತಂದೆತಾಯಿಗಳು ನನ್ನನು ಒಬ್ಬಂಟಿಯಾಗಿ ಬಿಟ್ಟು ಯಾವುದೊ ದೂರದೇಶಕ್ಕೆ ಹೊರಟು ಹೋಗಿದ್ದಾರೆ. ನನಗೆ ಯಾರೂ ದಿಕ್ಕಿಲ್ಲ. ನೀವು ಸ್ವಲ್ಪ ಆಶ್ರಯಕೊಟ್ಟರೆ ಅವರು ತಿರುಗಿ ಬರುವವರೆಗೆ ನಿಮ್ಮ ಮನೆಯಲ್ಲಿ ಇರುತ್ತೇನೆ' ಎಂದಳು. ಅನ್ನಪೂರ್ಣಮ್ಮನಿಗೆ ಆ ಹುಡುಗಿಯನ್ನು ನೋಡಿ ಕರುಣೆ

ಉಂಟಾಯಿತು. ತುಂಬಾ ಅಂದವಾಗಿ, ಮುದ್ದಾಗಿರುವ ಆ ಹುಡುಗಿಯನ್ನು 'ಇಲ್ಲೇ ಇರಬಹುದು' ಎಂದು ಹೇಳಿದಳು. ಗಂಡ ಕೂಡ ಯಾವುದೇ ಆಕ್ಷೇಪ ಮಾಡಲಿಲ್ಲ.

ಆ ಹುಡುಗಿಯು ಪ್ರತಿದಿನ ಮುಂಜಾಗೆ ಎದ್ದು ಮನೆಯೆಲ್ಲಾ ಶುದ್ದಮಾಡಿ, ಶುಭ್ರವಾಗಿ ತಲೆಗೆ ಸ್ನಾನಮಾಡಿ, ಅಡುಗೆ ಮಾಡುತ್ತಿದ್ದಳು. ದುರ್ಗಾಮಾತೆಗೆ ನೈವೇದ್ಯವನ್ನು ಇಡುತ್ತಿದ್ದಳು. ಎಲ್ಲರೂ ನಿದ್ರೆಯಿಂದದೇಳುವ ಮೊದಲೇ ಅಡುಗೆ ಪೂರ್ತಿಯಾಗಿ ತಯಾರಾಗಿರುತ್ತಿತ್ತು. ಅಷ್ಟೇ ಅಲ್ಲ, ಅನ್ನಪೂರ್ಣಮ್ಮನಿಗೆ ಏನೇ ಬೇಕಾದರೂ, ಕ್ಷಣದಲ್ಲಿ ತಂದುಕೊಡುತ್ತಿದ್ದಳು. ಕಾಲಿಗೆ ದಿನಾಲೂ ಮದ್ದು ಹಚ್ಚುತ್ತಿದ್ದಳು. ಸಮಯಕ್ಕೆ ಮಂಚದ ಹತ್ತಿರಕ್ಕೆ ಊಟವನ್ನು ತಂದು ಕೊಡುತ್ತಿದ್ದಳು. ಅನ್ನಪೂರ್ಣಮ್ಮ ಆ ಹುಡುಗಿಯನ್ನು ನೋಡಿ ತುಂಬಾ ಸಂತೋಷವಾಯಿತು. ತಿಂಗಳಲ್ಲೇ ಅನ್ನಪೂರ್ಣಮ್ಮ ತುಂಬಾ ಗುಣಮುಖಳಾದಳು. ನೆಮ್ಮದಿಯಾಗಿ ಮಂಚ ಇಳಿದು ಕೆಲಸವನ್ನು ಮಾಡಲು ಶುರುಮಾಡಿದಳು. ಆ ಹುಡುಗಿಯು ಮನೆಗೆ ಬಂದ ಅದೃಷ್ಟದಿಂದ ಇದೆಲ್ಲಾ ಜರುಗುತ್ತಿದೆಯೆಂದು ತಿಳಿದಳು. ಆ ರಾತ್ರಿ ಗಂಡನೊಟ್ಟಿಗೆ 'ಈ ಹುಡುಗಿಯನ್ನು ಯಾವಾಗಲೂ ನಮ್ಮ ಹತ್ತಿರ ಇಟ್ಟುಕೊಂಡು ಅವಳಿಗೆ ನಾವೇ ಮದುವೆ ಮಾಡುವ' ಎಂದು ಹೇಳಿದಳು. ಅದಕ್ಕೆ ಗಂಡನು ಸಂತೋಷದಿಂದ ಒಪ್ಪಿಕೊಂಡನು.

ಅನ್ನಪೂರ್ಣಮ್ಮ ಸಂತೋಷದಿಂದ ನಿದ್ರೆಹೋದಳು. ನಿದ್ರೆಯಲ್ಲಿ ಅವಳಿಗೆ ಅದ್ಭುತವಾದ ಕನಸ್ಸು ಬಂತು. ಆ ಕನಸ್ಸಲ್ಲಿ ಒಬ್ಬ ದೇವತೆ ಪ್ರತ್ಯಕ್ಷವಾಗಿ ಹೀಗೆ ಹೇಳಿದಳು. 'ಅನ್ನಪೂರ್ಣಮ್ಮ! ನಾನು ಶುಭದುರ್ಗೆಯು. ಯಾವಾಗಲೂ ನನ್ನನ್ನು ಪೂಜಿಸುವವರನ್ನು ನಿತ್ಯ ರಕ್ಷಿಸುತ್ತಿರುತ್ತೇನೆ. ನೀನೆಂದರೇ ನನಗೆಷ್ಟೋ ಅಭಿಮಾನ. ಅದಕ್ಕಾಗಿ ನಾನು ಹುಡುಗಿಯ ರೂಪದಲ್ಲಿ ನಿಮ್ಮ ಮನೆಗೆ ಬಂದೆನು. ನೀನು ಪೂರ್ತಿಯಾಗಿ ಚೇತರಿಸಿಕೊಂಡಿದ್ದಿ. ಇನ್ನು ನಾಳೆ ಮುಂಜಾನೆಯಿಂದ ನಿನಗೆ ಕಾಣಿಸುವುದಿಲ್ಲ. ನಿಮ್ಮಿಬ್ಬರ ಆದರ, ಸತ್ಕಾರವೂ ನನ್ನನ್ನು ತುಂಬಾ ಸಂತೋಷಪಡಿಸಿದೆ. ನಿಮ್ಮ ಕುಟುಂಬವು ಶಾಶ್ವತವಾಗಿ ಸುಖದಿಂದಿರುತ್ತೀರಿ' ಎಂದು ಹೇಳಿ ಮಾಯವಾದಳು. ಮರುದಿನ ನಿದ್ರೆಯಿಂದ ಎದ್ದಾಗ, ಕನಸ್ಸಿನಲ್ಲಿ ಹೇಳಿದ ಹಾಗೇ ಆ ಹುಡುಗಿಯು ಕಾಣಿಸಲಿಲ್ಲ. ಅನ್ನಪೂರ್ಣಮ್ಮ ಬಹಳ ಆಶ್ಚರ್ಯಪಟ್ಟಳು. 'ಓ ಜಗನ್ಮಾತಾ! ನಿನ್ನ ಕೈಯಿಂದಲೇ ಸೇವೆ ಮಾಡಿಕೊಂಡಿದ್ದೇನಾ ತಾಯೀ! ನಿನ್ನ ವರ್ಚಸ್ಸು ನೋಡಿಯಾದರೂ ನಿನ್ನನ್ನು ಗುರುತಿಸದೇ ಹೋದೆನಾ? ಎಂಥಹ ಮೂರ್ಖತನದವಳು? ಸೃಷ್ಟಿಯೆಲ್ಲ ನಿನ್ನ ಸೇವೆಗಾಗಿ ಪರಿತಪಿಸುತ್ತಿದ್ದರೆ, ನೀನು ಬಂದು ನನ್ನ ಸೇವೆಯನ್ನು ಮಾಡಿದ್ದೀಯಾ ತಾಯೀ! ಆಹಾ! ನನ್ನ ಭಾಗ್ಯವನ್ನು ಏನೆಂದು ಹೇಳಲಿ' ಎಂದು ಆ ತಾಯಿಯನ್ನು ಎಷ್ಟೋ ವಿಧಗಳಿಂದ ಸ್ತುತಿಸಿದಳು. ಅನಂತರ, ಕೃಷ್ಣ ಶರ್ಮನ ಕುಟುಂಬವೆಲ್ಲಾ ನಿತ್ಯ ಶ್ರೀ ಶುಭದುರ್ಗಾ ದೇವಿಯನ್ನು ಪೂಜಿಸುತ್ತಾ ಶಾಶ್ವತವಾದ ಸುಖದಿಂದ ಜೀವಿಸಿ, ಕೊನೆಗೆ ಮುಕ್ತಿಯನ್ನು ಹೊಂದಿದರು.

ನಾಲ್ಕನೇ ಅಧ್ಯಾಯವು ಸಂಪೂರ್ಣವಾಯಿತು
ಯಾ ದೇವಿ ಸರ್ವಭೂತೇಷು ಮಾತೃರೂಪೇಣಸಂಸ್ಥಿತಃ |
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ||

********

ಐದನೇ ಅಧ್ಯಾಯ

# ಕೇಶವ ವರ್ಮನ ಕಥೆ

ಪೂರ್ವಕಾಲದಲ್ಲಿ ತುಂಗಾಭದ್ರಾ ನದಿತೀರದಲ್ಲಿ ಕೇಶವಪುರಂ ಎಂಬ ಪಟ್ಟಣವಿತ್ತು. ಆ ಪಟ್ಟಣದಲ್ಲಿ ಬಹಳ ಜನರು ಧನವಂತರಿದ್ದರು. ಅವರಲ್ಲಿ ಕೇಶವ ವರ್ಮ ಪ್ರಮುಖನು. ಕೇಶವ ಶರ್ಮನಿಗೆ ಅಜ್ಜ, ತಂದೆಯಿಂದ ಹಿರಿಯರ ಎಷ್ಟೋ ಆಸ್ತಿ ಸಿಕ್ಕಿತ್ತು. ನೂರಾರು ಎಕರೆ ಬೆಳೆ ಬೆಳೆಯುವ ಹೊಲಗದ್ದೆಗಳು ಇತ್ತು. ಮನೆಯೆಲ್ಲಾ ಕೆಲಸದವರಿಂದ ತುಂಬಿರುರುತ್ತಿತ್ತು. ಕೇಶವ ವರ್ಮನ ಹೆಂಡತಿ ರುಕ್ಮಿಣಿ ಬಹಳ ಸೌಮ್ಯದವಳು. ಆ ದಂಪತಿಗಳಿಬ್ಬರೂ ತಾವು ಧನವಂತರೆನ್ನುವ ಅಹಂಕಾರವನ್ನು ಸ್ವಲ್ಪವೂ ತೋರಿಸದೇ ಎಷ್ಟೋ ದಾನಧರ್ಮಗಳನ್ನು ಮಾಡುತ್ತಿದ್ದರು. ಮನೆಯಲ್ಲಿ ಕೆಲಸ ಮಾಡುವವರನ್ನು ಕೂಡಾ ತುಂಬಾ ಪ್ರೀತಿಯಿಂದ ಮಾತಾಡಿಸುತ್ತಿದ್ದರು.

ಕೇಶವ ವರ್ಮನಿಗೆ ಇಬ್ಬರು ಗಂಡುಮಕ್ಕಳು. ಇವರು ಕೂಡಾ ಬಹಳ ಒಳ್ಳೆಯ ಸ್ವಭಾವ ಹೊಂದಿದವರಾಗಿ, ತಂದೆಗೆ ಎಲ್ಲಾ ವಿಷಯಗಳಲ್ಲಿ ಒಟ್ಟಾಗಿ ಸಹಾಯಮಾಡುತ್ತಿದ್ದರು. ಆ ಊರಲ್ಲಿ ಪುರಾತನ ಕಾಲದ ಶ್ರೀ ಚೆನ್ನಕೇಶವಸ್ವಾಮಿಯ ದೇವಾಲಯವಿತ್ತು. ಆ ದೇವಾಲಯದ ಸಂರಕ್ಷಣೆಯೆಲ್ಲಾ ಕೇಶವ ವರ್ಮ ಕುಟುಂಬವೇ ನೋಡಿಕೊಳ್ಳುತ್ತಿತ್ತು. ರುಕ್ಮಿಣಿಯಮ್ಮನಿಗೆ ಜಗನ್ಮಾತೆ ದುರ್ಗಾದೇವಿ ಎಂದರೆ ತುಂಬಾ ಭಕ್ತಿ. ಪ್ರತಿಸಂವತ್ಸರ ದಸರಾ, ನವರಾತ್ರಿಗಳನ್ನು ಬಹಳ ವೈಭವವಾಗಿ ನಡೆಸುತ್ತಿದ್ದಳು. ಊರಲ್ಲಿರುವ ಮುತ್ತೈದೆಯರನ್ನೆಲ್ಲಾ ಕರೆದು ಸೀರೆ, ರವಿಕೆಗಳನ್ನು ಕೊಟ್ಟು ಸತ್ಕರಿಸುತ್ತಿದ್ದಳು. ರುಕ್ಮಿಣಿಯು ಯಾವಾಗಲೂ ಕಿರುನಗೆಯಿಂದ ತುಂಬಾ ಉತ್ಸಾಹದಿಂದ ಕಾಣಿಸುತ್ತಿದ್ದಳು.

ದಿನಗಳು ಹೀಗೆ ಕಳೆಯುತ್ತಿರುವಾಗ, ಒಂದುದಿನ ರಾತ್ರಿ ಕೇಶವ ವರ್ಮನಿಗೆ ವಿಪರೀತವಾದ ಹೊಟ್ಟೆನೋವು ಬಂತು. ತಕ್ಷಣ ಪಟ್ಟಣದಲ್ಲಿರುವ ಪ್ರಮುಖ ವೈದ್ಯರಿಗೆ ಹೇಳಿಕಳಿಸಿದರು, ಅವರು ಬಂದು ಮದ್ದುಕೊಟ್ಟರು. ಮುಂಜಾನೆ ಸ್ವಲ್ಪ ತಗ್ಗಿತು. ಆದರೆ ಮಧ್ಯಾಹ್ನ ಪುನಃ ತಿರುಗಿ ಬಂತು. ಹೀಗೆ ಒಂದುವಾರ ಆಯಿತು. ನೋವು ಮಾತ್ರ ಕಡಿಮೆಯಾಗುತ್ತಿಲ್ಲ. ಏನು ತಿಂದರೂ ನೋವು ಬರುತ್ತಿತ್ತು. ಪಕ್ಕದ ಪಟ್ಟಣದಿಂದ ಬಹಳ ಪ್ರಮುಖ ವೈದ್ಯನು ಬಂದು ಹೊಸ ಮದ್ದು ಕೊಟ್ಟನು. ಅದರ ಪ್ರಭಾವವೂ ಎರಡು ದಿನಗಳು ಮಾತ್ರವೇ ಇತ್ತು. ಯಾವುದಾದರೂ ಹಣ್ಣು ತಿಂದರೆ ನೋವು ಇನ್ನೂ ಜಾಸ್ತಿಯಾಗತೊಡಗಿತು. ಇದೆಲ್ಲಾ ಯಾವುದೋ ಪೂರ್ವಜನ್ಮದಲ್ಲಿ ಮಾಡಿದ ಪಾಪದ ಫಲವಾಗಿ ಜರುಗುತ್ತಿದೆ ಎಂದು ಆ ದಂಪತಿಗಳು ಆಲೋಚಿಸಿದರು. ದಿನದಿಂದ ದಿನಕ್ಕೆ ಆಹಾರವಿಲ್ಲದೇ ಕೇಶವ ವರ್ಮನು ತುಂಬಾ ನಿತ್ರಾಣನಾದನು. ಕೇಶವ ವರ್ಮನ ಹೆಂಡತಿ ರುಕ್ಮಿಣಿಯು ತನ್ನ ಗಂಡನ ಆರೋಗ್ಯಕ್ಕಾಗಿ ಎಷ್ಟೋ ವ್ರತಗಳನ್ನು ಆಚರಿಸಿದಳು. ಆದರೆ, ಯಾವುದೇ ಫಲಿತವಿಲ್ಲದೆ ಹೋಯಿತು. ಹೀಗೆ ಎರಡು ಸಂವತ್ಸರಗಳು ಕಳೆಯಿತು. ಈ ಎರಡು ಸಂವತ್ಸರದಲ್ಲಿ ಅವರು ದರ್ಶನ ಮಾಡದ ಪುಣ್ಯಕ್ಷೇತ್ರವಿಲ್ಲ. ಆದರೂ ಕೇಶವ ವರ್ಮನಿಗೆ ಯಾವುದೇ ಉಪಶಮನವು ಲಭಿಸಲಿಲ್ಲ. ಸ್ವಲ್ಪ ತಿಂದರೂ ಬಹಳ ವಿಪರೀತವಾದ ಹೊಟ್ಟೆನೋವು ಬರುತ್ತಿತ್ತು. ಹೀಗಿರುವಾಗ, ಒಂದುದಿನ ಪಕ್ಕದೂರಿನಲ್ಲಿರುವ ಶ್ರೀ ದುರ್ಗಾದೇವಿಯ ದೇವಾಲಯದಲ್ಲಿ ಶುಕ್ರವಾರದ ದಿನ ಪೂಜೆಮಾಡಿಸಿರೆಂದು ಯಾರೋ ಹೇಳಿದರು. ಇದಕ್ಕೂಮೊದಲು, ರುಕ್ಮಿಣಿ ಎಷ್ಟೋ ಸಲ ಆ ದೇವಾಲಯಕ್ಕೆ ಹೋಗಿದ್ದಳು. ಕೇಶವ

ಶರ್ಮನು ಇದರಿಂದ ಯಾವ ಲಾಭವೂ ಇಲ್ಲವೆಂದು ಹೇಳಿದನು. ಆದರೆ, ರುಕ್ಮಿಣಿಯು ಸುಮ್ಮನಿರಲಿಲ್ಲ. ಹೋಗಲೇ ಬೇಕೆಂದಳು.

ಶುಕ್ರವಾರದ ದಿನ ಮುಂಜಾನೆ ರುಕ್ಮಿಣಿಯು ಗಂಡ, ಮಕ್ಕಳನ್ನು ಕೂಡಿಕೊಂಡು ಗಾಡಿಯಲ್ಲಿ ದೇವಾಲಯಕ್ಕೆ ಹೊರಟಳು. ದೇವಾಯದಲ್ಲಿ ಅವಳು ಕೆಲವು ಸ್ತ್ರೀಯರು ಅಲ್ಲಿಯ ಮಂಟಪದಲ್ಲಿ ಕುಳಿತುಕೊಂಡು ಯಾವುದೋ ವ್ರತಕಥೆಗಳನ್ನು ಓದುತ್ತಿದ್ದರು. ರುಕ್ಮಿಣಿಯು ಅಲ್ಲೇ ಆ ಕಥೆಗಳು ಪೂರ್ತಿಯಾಗುವವರೆಗೆ ಇದ್ದು, ಪ್ರಸಾದವಾಗಿ ಕೊಟ್ಟ ಬಾಳೆಹಣ್ಣನ್ನು ತೆಗೆದುಕೊಂಡಳು. ಆಕೆಯು ಆ ಹಣ್ಣನ್ನು ಭಕ್ತಿಯಿಂದ ಅರ್ಧ ತಾನು ತೆಗೆದುಕೊಂಡು, ಉಳಿದ ಅರ್ಧವನ್ನು ಗಂಡನಿಗೆ ಕೊಟ್ಟಳು. ಆಗ ಕೇಶವ ವರ್ಮನು 'ರುಕ್ಮಿಣಿ! ಹಣ್ಣನ್ನು ತಿಂದರೆ ನನ್ನ ಹೊಟ್ಟೆನೋವು ಇನ್ನೂ ಜಾಸ್ತಿಯಾಗುತ್ತದೆಯೆಂದು ನಿನಗೆ ತಿಳಿದಿದೆ ಅಲ್ವಾ' ಎಂದು ಹೇಳಿದನು. ಆದರೂ ಭಕ್ತಿಯಿಂದ ಆ ಬಾಳೆಹಣ್ಣನ್ನು ತಿಂದನು. ತಕ್ಷಣ! ಅವನ ಶರೀರಕ್ಕೆಲ್ಲಾ ಯಾವುದೋ ವಿದ್ಯುತ್ ಪ್ರಸರಿಸಿದಂತಾಗಿ, ತೇಜೋಮಾಯವಾಗಿ, ಹೊಟ್ಟೆನೋವು ಮಾಯವಾಯಿತು. ತನ್ನ ಗಂಡನನ್ನು ನೋಡಿದ ರುಕ್ಮಿಣಿಯು ಬಹಳ ಆಶ್ಚರ್ಯಪಡುತ್ತಾ ಆ ಸ್ತ್ರೀಯರ ಹತ್ತಿರಹೋಗಿ ಈ ವ್ರತವು ಯಾವುದೆಂದು ಕೇಳಿದಳು. ಅವರು ಇದು ಶ್ರೀ ಶುಭದುರ್ಗಾ ವ್ರತವೆಂದು ತುಂಬಾ ಮಹಿಮಾನ್ವಿತವಾದದ್ದೆಂದು ಹೇಳಿದರು. ಅಂದಿನಿಂದ ರುಕ್ಮಿಣಿಯು ಪ್ರತಿ ಶುಕ್ರವಾರ ಶ್ರೀ ಶುಭದುರ್ಗಾ ವ್ರತವನ್ನು ಮಾಡಲು ಪ್ರಾರಂಭಿಸಿದಳು. ಆ ವ್ರತದ ಫಲಿತವಾಗಿ ಕೇಶವ ವರ್ಮನು ಪೂರ್ತಿ ಆರೋಗ್ಯವಂತನಾದನು. ಕೇಶವ ವರ್ಮ, ರುಕ್ಮಿಣಿ ದಂಪತಿಗಳಿಬ್ಬರೂ ಆ ಶ್ರೀ ಶುಭದುರ್ಗಾ ದೇವಿಯ ಅನುಗ್ರಹದಿಂದ ಶಾಶ್ವತವಾದ ಸುಖದಿಂದ ಜೀವಿಸಿ, ಕೊನೆಗೆ ಮುಕ್ತಿಯನ್ನು ಪಡೆದರು.

ಐದನೇ ಅಧ್ಯಾಯವು ಸಂಪೂರ್ಣವಾಯಿತು
ಯಾ ದೇವಿ ಸರ್ವಭೂತೇಷು ಮಾತೃರೂಪೇಣಸಂಸ್ಥಿತಃ |
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ||
********

# <u>ಗ್ರಂಥಕರ್ತನ ಸೂಚನೆ</u>

ಸಾಕ್ಷಾತ್ ಶ್ರೀ ಶುಭದುರ್ಗಾ ದೇವಿಯೇ 'ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ' ಎಂಬ ಭಕ್ತನಿಗೆ ಅನುಗ್ರಹಿಸಿದ ಈ ವ್ರತವು ಅತ್ಯಂತ ಮಹಿಮೆಯುಳ್ಳದ್ದು. ಪ್ರತಿ ತಿಂಗಳು ಯಾವ ಶುಕ್ರವಾರದ ದಿನವಾದರೂ ಮಾಡಿಕೊಳ್ಳಬಹುದು. ಮುಖ್ಯವಾಗಿ ಚೈತ್ರ, ವೈಶಾಖ, ಶ್ರಾವಣ, ಅಶ್ವಯುಜ, ಕಾರ್ತಿಕ, ಮಾರ್ಘಶಿರ, ಮಾಘ ಮಾಸಗಳಲ್ಲಿಯ ಯಾವುದೇ ಶುಕ್ರವಾರದ ದಿನ ಆಚರಿಸಿದರೆ ಅತ್ಯಂತ ಫಲದಾಯಕ. ದಶಮಿ, ಏಕಾದಶಿ, ಹುಣ್ಣಿಮೆ ಅಥವಾ ಸಂಕ್ರಾಂತಿಯಿಂದ ಕೂಡಿದ ಶುಕ್ರವಾರವಾದರೆ ಬಹಳ ಶ್ರೇಷ್ಠ. ದಸರಾ, ನವರಾತ್ರಿಗಳಲ್ಲಿಯ ಯಾವ ದಿನವಾದರೂ ಆಚರಿಸಿದರೆ ಅನೇಕ ಶುಭಗಳು ಉಂಟಾಗುತ್ತದೆ. ನವರಾತ್ರಿಯಲ್ಲಿ ಪ್ರತಿದಿನ ಆಚರಿಸಿದವರಿಗೆ ಸಾವಿರ ಅಶ್ವಮೇಧಯಾಗ ಮಾಡಿದ ಫಲವು ಲಭಿಸುತ್ತದೆ. ಈ ವ್ರತವನ್ನು ಆಚರಿಸಿದ ಸ್ತ್ರೀಯರು ಧೀರ್ಘಸುಮಂಗಲಿಯರಾಗಿ ಬಾಳುತ್ತಾರೆ. ಈ ವ್ರತವನ್ನು ಮಾಡುವ ಕನ್ಯೆಯರಿಗೆ ಒಳ್ಳೆಯ ವರನೊಂದಿಗೆ ಕೂಡಲೇ ವಿವಾಹ ನಿಶ್ಚಯವಾಗುತ್ತದೆ. ಸಂತಾನಭಾಗ್ಯವಿಲ್ಲದವರು ಮಾಡಿದರೆ, ಒಳ್ಳೆಯ ಸಂತಾನವು ಲಭಿಸುತ್ತದೆ. ಅನಾರೋಗ್ಯದಿಂದ ಇದ್ದವರಿಗೆ ತಕ್ಷಣ ಒಳ್ಳೆಯ ಆರೋಗ್ಯವು ಉಂಟಾಗುತ್ತದೆ. ವ್ಯಾಪಾರದಲ್ಲಿ ಲಾಭವು ಉಂಟಾಗುತ್ತದೆ. ಯಾವ ಮನೆಯಲ್ಲಿ ಪ್ರತಿ ಶುಕ್ರವಾರ ದಂಪತಿಗಳಲ್ಲಿ ಯಾರೋ ಒಬ್ಬರು ಈ ವ್ರತವನ್ನು ಮಾಡುತಾರೋ ಅವರ ಮನೆಯಲ್ಲಿ ಸರ್ವಸೌಭಾಗ್ಯಗಳು ಉಂಟಾಗುತ್ತದೆ. ಅವರ ಮನೆ ಯಾವತ್ತೂ ಧನ ಧಾನ್ಯಗಳಿಂದ ತುಂಬಿ ತುಳುಕುತ್ತಿರುತ್ತದೆ. ಯಾವುದಕ್ಕೂ ಕೊರತೆಯಿರುವುದಿಲ್ಲ. ಸಾಕ್ಷಾತ್ ಜಗನ್ಮಾತೆಯೇ 'ವಿಶ್ವಪತಿ' ಎಂಬ ಭಕ್ತನಿಗೆ ಅನುಗ್ರಹಿಸಿದ ಈ ಶ್ರೀ ಶುಭದುರ್ಗಾ ವ್ರತವು, ಈ ಕಲಿಯುಗದ ಎಲ್ಲಾ ಕಷ್ಟಗಳಿಂದ ಹೊರಬೀಳಿಸುವ ಬಹಳ ಸುಲಭವಾದ ಮಾರ್ಗ. ಸರ್ವಸೌಭಾಗ್ಯಗಳು ಉಂಟಾಗಲೂ ತುಂಬಾ ಸುಲಭವಾದ ಮಾರ್ಗ. ಈ ವ್ರತವನ್ನು ಆಚರಿಸಿದವರಿಗೂ, ವ್ರತಕಥೆಯನ್ನು ಹೇಳಿದ/ಕೇಳಿದವರಿಗೂ, ಪ್ರಸಾದವನ್ನು ಸ್ವೀಕರಿಸಿದವರಿಗೂ ಸಕಲ ಶುಭಗಳು ಜರುಗುತ್ತವೆ. ಶ್ರೀ ಶುಭದುರ್ಗಾ ದೇವಿಯ ಅನುಗ್ರಹದಿಂದ ಜೀವನವೆಲ್ಲಾ ಶುಭಪ್ರದವಾಗಿ ಜರುಗುತ್ತದೆ.

ಸ್ವಸ್ತಿ ಪ್ರಜಾಭ್ಯ: ಪರಿಪಾಲಯಂತಾಂ | ನ್ಯಾಯೇನ ಮಾರ್ಗೇಣ ಮಹೀಂ ಮಹೀಶಾ: ||

ಗೋಬ್ರಾಹಣೇಭ್ಯ: ಶುಭಮಸ್ತು ನಿತ್ಯಂ | ಲೋಕಾ: ಸಮಸ್ತಾ: ಸುಖಿನೋ ಭವಂತು ||

**|| ಓಂ ತತ್ಸತ್ ||**

********

# ಹಾರತೀ ಮೀರೇಲ ಇವ್ವರೇ... ಅಂಬಕು

ಹಾರತೀ ಮೀರೇಲ ಇವ್ವರೇ... ಅಂಬಕು ಮಂಗಳ ಹಾರತಿ ಮೀರೇಲ ಇವ್ವರೇ
ಹಾರತೀ ಮೀರೇಲ ಇವ್ವರೇ ಜ್ಞಾನ ವಿದ್ಯಾಲಕೆಲ್ಲ ಪ್ರಬಲಮು
ಸ್ತ್ರೀಲಲೋ ಪದಿಯಾರು ವೆನ್ನೆಲ - ಮೇಲಿಮಿ ಬಂಗಾರು ತಲ್ಲಿಕಿ
ಪಾದಮುಲಕು ಪೂಜ ಸೇಯಾರೇ, ಮಾ ತಲ್ಲಿಕಿಪ್ಪುಡು ಪಾರಿಜಾತಾಪು ಹಾರಮಿವ್ವರೇ
|| ಹಾರತಿ ||

ಆಣಿಮುತ್ಯಪು ಹಾರಮುಲ - ಮೊಲ ನೂಲು ಗಜ್ಜಲ
ಜೋಡು ಅಂದೆಲ, ರವ್ವಲ ಪಾಪಿಡಿ ಬೊಟ್ಟು ಮುಂಗೆರ
ಸಮಯಮುಗ ಧರಿಯಿಂಚು ತಲ್ಲಿಕಿ, ಹಾರತೀ ಮೀರೇಲ ಇವ್ವರೇ ಅಂಬಕು
|| ಹಾರತಿ ||

ಇಂತ ಪರಕೇಲ ನಾನಾರೇ - ಶಂಭುನೀ ದೇವಿಕಿ
ಚೆಂತ ನುಂಡಿ ಪೂಜ ಸೇಯಾರೇ,
ಚೆಂತ ನುಂಡಿ ಪೂಜ ಸೇಯಾರೇ - ಶಂಕರೀ ಓಂಕಾರಿ ಮೇಧಿನಿ
ಕುಂಕುಮಕ್ಷತಲಂಕಾರಿಕಿ ಪೊಂಕಮ್ಮೈನ ಅಲಂಕಾರಿಕಿ
ಹಾರತೀ ಮೀರೇಲ ಇವ್ವರೇ ಅಂಬಕು || ಹಾರತಿ ||

ಲಕ್ಷವತ್ತುಲ ಜ್ಯೋತಿಕೂರ್ಚರೇ, ಮಾ ತಲ್ಲಿಕಿಪುಡು
ಪಚ್ಚಲಾ ಪಳ್ಳೇರಮುಂಚಾರೇ ರಕ್ಷಿತಂಬುಗ ನುಂಡಿ
ವೇದಾಕ್ಷರಂಬೈನ ರಾಕ್ಷಸ ಸಂಹರಿಕಿಪುಡು
ಮುಚ್ಚಟಗ ಮುದಮುತೋ ಪಾಡುಕೊನುಚೂ,
ಹಾರತೀ ಮೀರೇಲ ಇವ್ವರೇ ಅಂಬಕು || ಹಾರತಿ ||

********

# ಮಂಗಳ ಹಾರತಿ

ಮಣಿದ್ವೀಪವಾಸೀ ಜಯಮಂಗಳಂ
ಮಂಜುಭಾಷಿಣಿ ಶುಭಮಂಗಳಂ
ರತ್ನಸಿಂಹಾಸಿನೀ ಜಯಮಂಗಳಂ
ರಾಜೀವಲೋಚನಿ ಶುಭಮಂಗಳಂ
ರಾಜರಾಜೇಶ್ವರಿ ಜಯಮಂಗಳಂ
ರಜತಗಿರೀಶ್ವರಿ ಶುಭಮಂಗಳಂ

********

## ಮಹಾ ಸಂಪದಲಿಚ್ಚು ಮಣಿದ್ವೀಪ ವರ್ಣನ

ಮಹಾಶಕ್ತಿ ಮಣಿದ್ವೀಪನಿವಾಸಿನಿ
ಮುಲ್ಲೋಕಾಲಕು ಮೂಲಪ್ರಕಾಶಿನಿ
ಮಣಿದ್ವೀಪಮುಲೋ ಮಂತ್ರರೂಪಿಣಿ
ಮನಸ್ಸುಲಲೋ ಕೊಲುವೈಯುನ್ನಡಿ || 1 ||

ಸುಗಂಧ ಪರಿಮಳ ಪುಷ್ಪಾಲೆನ್ನೊ ವೇಲು
ಅನಂತಸುಂದರ ಸುವರ್ಣಪೂಲು
ಅಚಂಚಲಂಬಗು ಮನೋ ಸುಖಾಲು
ಮಣಿದ್ವೀಪಾನಿಕಿ ಮಹಾನಿಧುಲು || 2 ||

ಲಕ್ಷಲ ಲಕ್ಷಲ ಲಾವಣ್ಯಾಲು
ಅಕ್ಷರ ಲಕ್ಷಲ ವಾಕ್ಸಂಪದಲು
ಲಕ್ಷಲ ಲಕ್ಷಲ ಲಕ್ಷ್ಮೀಪತುಲು
ಮಣಿದ್ವೀಪಾನಿಕಿ ಮಹಾನಿಧುಲು || 3 ||

ಪಾರಿಜಾತ ವನ ಸೌಗಂಧಾಲು
ಸುರಾಧಿನಾಧುಳ ಸತ್ಸಂಗಾಲು
ಗಂಧರ್ವಾದುಲ ಗಾನಸ್ವರಾಲು
ಮಣಿದ್ವೀಪಾನಿಕಿ ಮಹಾನಿಧುಲು || 4 ||

**ಭುವನೇಶ್ವರಿ ಸಂಕಲ್ಪಮೇ ಜನಿಯಿಂಚೆ ಮಣಿದ್ವೀಪಂ**
**ದೇವದೇವುಲ ನಿವಾಸಮು ಅದಿಯೇ ಕೈವಲ್ಯಮ್**

ಪದ್ಮರಾಗಮುಲು, ಸುವರ್ಣಮಣುಲು
ಪದಿ ಆಮಡಲು ಪೊಡವುನಗಲವು
ಮಧುರ ಮಧುರಮಗು ಚಂದನಸುಧಲು
ಮಣಿದ್ವೀಪಾನಿಕಿ ಮಹಾನಿಧುಲು || 5 ||

ಅರುವದಿ ನಾಲುಗು ಕಳಾಮತಲ್ಲುಲು
ವರಾಲನೊಸಗೇ ಪದಾರುಶಕ್ತುಲು
ಪರಿವಾರಮುತೋ ಪಂಚಬ್ರಹ್ಮಾಲು
ಮಣಿದ್ವೀಪಾನಿಕಿ ಮಹಾನಿಧುಲು || 6 ||

ಅಷ್ಟಸಿದ್ಧುಲು ನವನವನಿಧುಲು
ಅಷ್ಟದಿಕ್ಕುಲೂ ದಿಕ್ಪಾಲಕುಲು
ಸೃಷ್ಟಿಕರ್ತಲು ಸುರಲೋಕಾಲು
ಮಣಿದ್ವೀಪಾನಿಕಿ ಮಹಾನಿಧುಲು || 7 ||

ಕೋಟಿಸೂರ್ಯುಲ ಪ್ರಚಂಡಕಾಂತುಲು
ಕೋಟಿಚಂದ್ರುಲ ಚಲ್ಲನಿವೆಲುಗುಲು
ಕೋಟಿತಾರಲ ವೆಲುಗುಜಿಲುಗುಲು
ಮಣಿದ್ವೀಪಾನಿಕಿ ಮಹಾನಿಧುಲು || 8 || || **ಭುವ** ||

ಕಂಚುಗೋಡಲ ಪ್ರಾಕಾರಾಲು
ರಾಗಿಗೊಡಲ ಚತುರಸ್ರಾಲು
ಏಡಾಮಡಲ ರತ್ನಪುರಾಸುಲು
ಮಣಿದ್ವೀಪಾನಿಕಿ ಮಹಾನಿಧುಲು || 9 ||

ಪಂಚಾಮೃತಮಯ ಸರೋವರಾಲು
ಪಂಚಲೋಹಮಯ ಪ್ರಾಕಾರಾಲು
ಪ್ರಪಂಚಮೇಲೇ ಪ್ರಜಾಧಿಪತುಳು
ಮಣಿದ್ವೀಪಾನಿಕಿ ಮಹಾನಿಧುಲು || 10 ||

ಇಂದ್ರನೀಲಮಣಿ ಆಭರಣಾಲು
ವಜ್ರಪುಕೋಟಲು ವೈಡೂರ್ಯಲು
ಪುಷ್ಯರಾಗಮಣಿ ಪ್ರಾಕಾರಾಲು
ಮಣಿದ್ವೀಪಾನಿಕಿ ಮಹಾನಿಧುಲು || 11 ||

ಸಪ್ತಕೋಟಿ ಘನ ಮಂತ್ರವಿದ್ಯಾಲು
ಸರ್ವಶುಭಪ್ರದ ಇಚ್ಛಾಶಕ್ತುಳು
ಶ್ರೀ ಗಾಯತ್ರಿ ಜ್ಞಾನಶಕ್ತುಳು
ಮಣಿದ್ವೀಪಾನಿಕಿ ಮಹಾನಿಧುಲು || 12 || || **ಭುವ** ||

ಮಿಲಮಿಲಲಾಡೇ ಮುತ್ಯಪುರಾಸುಲು
ತಳತಳಲಾಡೇ ಚಂದ್ರಕಾಂತಮುಲು
ವಿದ್ಯುಲ್ಲತಲು ಮರಕತಮಣುಲು
ಮಣಿದ್ವೀಪಾನಿಕಿ ಮಹಾನಿಧುಲು || 13 ||

ಕುಬೇರ ಇಂದ್ರ ವರುಣದೇವುಲು
ಶುಭಾಲ ನೊಸಗೇ ಅಗ್ನಿವಾಯುವುಲು
ಭೂಮಿ ಗಣಪತಿ ಪರಿವಾರಾಮುಲು
ಮಣಿದ್ವೀಪಾನಿಕಿ ಮಹಾನಿಧುಲು || 14 ||

ಭಕ್ತಿಜ್ಞಾನ ವೈರಾಗ್ಯಸಿದ್ಧುಲು
ಪಂಚಭೂತಮುಲು ಪಂಚಶಕ್ತುಲು
ಸಪ್ತಋಷುಲು, ನವಗ್ರಹಾಲು
ಮಣಿದ್ವೀಪಾನಿಕಿ ಮಹಾನಿಧುಲು || 15 ||

ಕಸ್ತೂರಿ ಮಲ್ಲಿಕಕುಂದನ ವನಾಲು
ಸೂರ್ಯಕಾಂತಿ ಶಿಲ ಮಹಾಗ್ರಹಾಲು
ಆರು ಋತುವುಲು ಚತುರ್ವೇದಾಲು
ಮಣಿದ್ವೀಪಾನಿಕಿ ಮಹಾನಿಧುಲು ||16 || || **ಭುವ** ||

ಮಂತ್ರಿಣಿ ದಂಡಿನಿ ಶಕ್ತಿ ಸೇನಲು
ಕಾಳಿಕರಾಳಿ ಸೇನಾಪತುಳು
ಮುಪ್ಪದಿ ರೆಂಡು ಮಹಾಶಕ್ತುಲು
ಮಣಿದ್ವೀಪಾನಿಕಿ ಮಹಾನಿಧುಲು || 17 ||

ಸುವರ್ಣರಂಜಿತ ಸುಂದರಗಿರುಲು
ಅನಂತದೇವಿ ಪರಿಚಾರಕಲು
ಗೋಮೇಧಿಕಮಾಣಿ ನಿರ್ಮಿತಗುಹಾಲು
ಮಣಿದ್ವೀಪಾನಿಕಿ ಮಹಾನಿಧುಲು || 18 ||

ಸಪ್ತಸಮುದ್ರಾಮುಲನಂತ ನಿಧುಲು
ಯಕ್ಷಕಿನ್ನೆರ ಕಿಂಪುರುಷಾದುಲು
ನಾನಾಜಗಮುಲು ನದೀನದಮುಲು
ಮಣಿದ್ವೀಪಾನಿಕಿ ಮಹಾನಿಧುಲು || 19 ||

ಮಾನವ ಮಾಧವದೇವಗಣಮುಲು
ಕಾಮಧೇನುವು ಕಲ್ಪತರುವುಲು
ಸೃಷ್ಟಿಸ್ಥಿತಿಲಯ ಕಾರಣಮೂರ್ತುಲು
ಮಣಿದ್ವೀಪಾನಿಕಿ ಮಹಾನಿಧುಲು || 20 || ||**ಭುವ** ||

ಕೋಟಿಪ್ರಕೃತುಲ ಸೌಂದರ್ಯಾಲು
ಸಕಲವೇದಮುಲು ಉಪನಿಷತ್ತುಲು
ಪದಾರ್ಥ೦ಕುಲ ಪದ್ಮಶಕ್ತುಲು
ಮಣಿದ್ವೀಪಾನಿಕಿ ಮಹಾನಿಧುಲು || 21 ||

ದಿವ್ಯಫಲಮುಲು ದಿವ್ಯಾಸ್ತ್ರಮುಲು
ದಿವ್ಯಪುರುಷುಲು ಧೀರಮಾತಲು
ದಿವ್ಯಜಗಮುಲು ದಿವ್ಯಶಕ್ತುಲು
ಮಣಿದ್ವೀಪಾನಿಕಿ ಮಹಾನಿಧುಲು || 22 ||

ಶ್ರೀ ವಿಘ್ನೇಶ್ವರ ಕುಮಾರಸ್ವಾಮುಲು
ಜ್ಞಾನಮುಕ್ತಿ ಏಕಾಂತ ಭವನಮುಲು
ಮಣಿನಿರ್ಮಿತಮಗು ಮಂಡಪಾಲು
ಮಣಿದ್ವೀಪಾನಿಕಿ ಮಹಾನಿಧುಲು || 23 ||

ಪಂಚಭೂತಮುಲು ಯಜಮಾನ್ಯಾಲು
ಪ್ರವಾಳಸಾಲಂ ಅನೇಕ ಶಕ್ತುಲು
ಸಂತಾನವೃಕ್ಷ ಸಮುದಾಯಾಲು
ಮಣಿದ್ವೀಪಾನಿಕಿ ಮಹಾನಿಧುಲು ||24 || || **ಭುವ** ||

ಚಿಂತಾಮಣುಲು ನವರತ್ನಾಲು
ನೂರಾಮಾಡಲು ವಜ್ರಪುರಾಸುಲು
ವಸಂತವನಮುಲು ಗರುಡಪಕ್ಷಿಲು
ಮಣಿದ್ವೀಪಾನಿಕಿ ಮಹಾನಿಧುಲು || 25 ||

ದುಃಖಮು ತೆಲಿಯನಿ ದೇವಿಸೇನಾಲು
ನಟನಾಟ್ಯಾಲು ಸಂಗೀತಾಲು
ಧನಕನಕಾಲು ಪುರುಷಾರ್ಥಾಲು
ಮಣಿದ್ವೀಪಾನಿಕಿ ಮಹಾನಿಧುಲು || 26 ||

ಪದುನಾಲ್ಗು ಲೋಕಾಲನ್ನಿಟಿಪೈನ
ಸರ್ವಲೋಕಮನು ಲೋಕಮುಗಲದು
ಸರ್ವಲೋಕಮೇ ಈ ಮಣಿದ್ವೀಪಂ
ಸರ್ವೇಶ್ವರಿ ಕದಿ ಶಾಶ್ವತ ಸ್ಥಾನಂ || 27 ||

ಚಿಂತಾಮಣುಲ ಮಂದಿರಮಂದು
ಪಂಚಬ್ರಹ್ಮಲ ಮಂಚಮು ಪೈನ
ಮಹದೇವುಡು ಭುವನೇಶ್ವರಿತೋ
ನಿವಾಸಿಸ್ತಾಡು ಮಣಿದ್ವೀಪಮುಲೋ
ಮಣಿದ್ವೀಪಾನಿಕಿ ಮಹಾನಿಧುಲು ||28 || || **ಭುವ** ||

ಮಣಿಗಣಖಚಿತ ಆಭರಣಾಲು
ಚಿಂತಾಮಣಿ ಪರಮೇಶ್ವರಿದಾಲ್ಚಿ
ಸೌಂದರ್ಯನಿಕಿ ಸೌಂದರ್ಯಮುಗಾ
ಆಗುಪಡುತುಂದಿ ಮಣಿದ್ವೀಪಮುಲೋ || 29 ||

ಪರದೇವತನು ನಿತ್ಯಮುಕೊಲಿಚಿ
ಮನಸ್ಸರ್ಪಿಂಚಿ ಅರ್ಚಿOಚಿನಚೋ
ಅಪಾರಧನಾಮು ಸಂಪದಲಿಚ್ಚಿ
ಮಣಿದ್ವೀಪೇಶ್ವರಿ ದೀವಿಸ್ತುOದಿ || 30 ||

ನೂತನ ಗೃಹಮುಲು ಕಟ್ಟಿನವಾರು
ಮಣಿದ್ವೀಪವರ್ಣನ ತೊಮ್ಮಿದಿಸಾರ್ಲು

ಚದಿವಿನ ಚಾಲು ಅಂತಾ ಶುಭಮೇ
ಅಷ್ಟಸಂಪದಲ ತುಲತೂಗೇರು || 31 ||

ಶಿವ ಕವಿತೇಶ್ವರಿ ಶ್ರೀ ಚಕ್ರೇಶ್ವರಿ
ಮಣಿದ್ವೀಪಕ ವರ್ಣನ ಚದಿವಿನಚೋಟ
ತಿಷ್ಟವೇಸುಕುನಿ ಕೂರ್ಚುನುನಂಟ
ಕೋಟಿ ಶುಭಾಲನು ಸಮಕೂರ್ಚುಟಕೈ || 32||
ಭುವನೇಶ್ವರಿ ಸಂಕಲ್ಪಮೇ ಜನಿಯಿಂಚೆ ಮಣಿದ್ವೀಪಂ
ದೇವದೇವುಲ ನಿವಾಸಮು ಅದಿಯೇ ಕೈವಲ್ಯಮ್ || **ಭುವ** ||

********



ಓಂ ಕಾತ್ಯಾಯನ್ಯೈ ಚ ವಿದ್ಮಹೇ |
ಕನ್ಯಾಕುಮಾಯ್ಯೈ ಚ ಧೀಮಹಿ |
ತನ್ನೋ ದುರ್ಗಿ: ಪ್ರಚೋದಯಾತ್ ||



ಅಮ್ಮಲ ಗನ್ನಯಮ್ಮ, ಮುಗುರಮ್ಮಲಮೂಲಪುಟಮ್ಮ, ಚಾಲಪೆದ್ದಮ್ಮ,
ಸುರಾರುಲಮ್ಮಕದು ಪಾರಡಿಪುಚ್ಚಿನಯಮ್ಮ, ತನ್ನು ನಮ್ಮಿನ
ವೇಲ್ಪುಟಮ್ಮಲಮನಮ್ಮುಲ ನುಂಡೆಡಿಯಮ್ಮ, ದುರ್ಗಾ ಮಾಯಮ್ಮ,
ಕೃಪಾಬ್ಧಿ, ಯಿಚ್ಚುತ ಮಾಹತ್ತ್ಯಕವಿತ್ವ ಪಟುತ್ವ ಸಂಪದಲ್.